
Azim Premji Foundation



Karnataka Field Institutes MAY -2016 Issue No.: 45

# ಬಯಲು Bayalu

*....a space of our own*





ನೀನೆಲ್ಲಿ
ನಾ ಇದ್ದೆ ಅಲ್ಲಿ
ಬಂದೆನು ಇಲ್ಲಿ
ಮತ್ತೆ ಹೋಗುವೆ ಅಲ್ಲಿ
ಅದು ಎಲ್ಲಿ ಎನ್ನುವದು ತಿಳಿದರೆ
ತಿಳಿಸುವೆ ನಿಮಗೆ ಈ ಕ್ಷಣದಲ್ಲಿ ಇಲ್ಲಿ..!!!!

– ಗೋಪಾಲ ಸಾಲಿ.

# Table of Content/ಪರಿವಿಡಿ


1. May Day Missing..........................................................................................Peri
2. ನನ್ನ ಜೀವನದ ಸ್ಫೂರ್ತಿಯ ಸೆಲೆ; Inspiration of my life..........................................Bhavya
3. ಬೇಸಿಗೆ ರಜೆ ಮಜದಿಂದ ನಡೆ; Summer holiday and enjoyment...........................Ramesh kumar D Badigera
4. ರಜೆಯ ಒಂದು ನೆನಪು; A memory of holiday....................................................Sudarshan K
5. Remembering summer vacation.............................................................Rajesh S mahanthmath
6. ಹೇಳು ಓ ಗೆಳೆಯ, ಇನ್ನೆಲ್ಲಿ ಆ ದಿನಗಳು; Sweet Memories of Summer Days...........Reghavendra Herle G
7. ಬೇಸಿಗೆ ರಜಾ; Summer holidays............................................................Ramachandra Bhat
8. ವೈ ಡು ಐ ರೈಟ್?; Why Do I Write?...........................................................Yathiraj Sharma
9. ರಜಾ ಶಿಬಿರ–ಅಳಿದುಳಿದ ತರಬೇತುದಾರನ ಟಿಪ್ಪಣಿಗಳು; Holiday camp- short notes of the trainer....Peri
10. Who am I?.....................................................................................Ravindra Jain
11. ಶಿಕ್ಷಕರ ವೃತ್ತಿ ಬದುಕಿನ ಜೀವಾಳ; Motivation for the professional life of the teachers.....Ramesh Kumar D. Badigera
12. ಒಂದು ಜನಪದ ಕಥೆ; A folk story...........................................................Ramakrishna
13. ತಾರತಮ್ಯ– ಸ್ವಾಭಾವಿಕ ಅಥವಾ ನಿರ್ಮಿತ!; Discrimination- Natural or Man made!....Anil Kudambal
14. ಹೆಣ್ಣೇ ನಿನಗೇಕೆ ಹೀಗೆ?; Status of women in present context.........................Aravind Rathod
15. ಬೇಸಿಗೆ ರಜೆ; Summer vacation...........................................................Ramachandra Bhat
16. ಇಂದಾದರೂ ನನಸಾಗುವುದೇ ರಂಗಣ್ಣನ ಕನಸಿನ ದಿನಗಳು?; Rangannana Kanasina Dinagalu-A Book review..........................................................................................Harish Shetty
17. ಬೇಸಿಗೆಯ ದಿನಗಳಲ್ಲಿ; In summer days...........................................................Jagadevi

- **Peri**

## May Day Missing

It disturbed me that on 1st of May I could not find a single article on May Day in either The Hindu or Prajavani, the two dailies I read. I started searching in other papers and magazines. It was surprising to see that very little had been covered as article or news in other magazines too. Even the left oriented papers carried only lip sympathy materials. It was such an important day and why this silence and why this avoidance! The papers behaved as if this day had no special significance. They under played it so much that not even a whisper was heard in the midst of all the chaos and nonsense that are numbing us.

May Day is Workers' Day, International Labor Day. It was celebrated to mark victory of years of fight against exploitation of the workers. It was the fight against the unjust salary payment, pathetic working conditions and unfair work hours. The demand was to reduce the working day to 8 hours. The capitalist factory owners were opposing it adamantly using against all their might and force. The fight was between the unequal. The mighty capitalists were on one side and the workers on the other. The workers were having nothing with them to fight but their determined spirit to end the injustice.




The struggle for justice and dignity started long back by the famous Roman slave rebel Spartacus. But the present May Day celebration got its significance as a mark of struggling labors in modern world after the Haymarket affair in Chicago in 1886. It was a fight to end the long working hours to 8 hours. Hence 8 hours became a prominent slogan of the international working community. In India the first of the May Day celebrations was organized by Labor Kisan Party of Hindusthan in Madras presidency in 1923. One on Tripline beach and another on the beach opposite Madras/Chennai High Court. It was said that the first of the red flags in India, the symbol of workers unity, was being used on that occassion.

The globalized multinational market has changed the scene across the world. Not that the exploitation has come down, nor the injustice has decreased. In fact all the studies do prove that the exploitation of the workers and the poor have increased and its means are more sophisticated and subtle. The injustice today is all pervading. It has rendered workers completely voiceless and powerless. Even the workers do not see the meaning and strength of coming together and fighting for their rights. The unionization is completely missing exposing the workers to exploitation and making them more vulnerable. The workers do not see any way or hope to better the conditions since the all-powerful owners have become more powerful and violent. The rulers and owners have successfully erased the workers consciousness from the peoples' mind. This makes workers and people numb and alienated. This is done very powerfully and

creatively with the help of the media. This time the silence on ‘May Day’ proves that all the forces are working together towards creating a state of being in which workers consciousness is completely erased. They are neutralized and rendered powerless and hopeless. Hence, no discussion, no articles, no images, no films, no rallies, no meetings, no get together, nothing which would bring workers together and make them feel one!

Suicide is the last resort when you lose hope. Lose hope in everything, yourself and other human beings. Farmers are attempting suicide. No strikes, no picketing, no demands put forth, no negotiations. This is a very sorry state of affairs for the working class. The only hope is the small struggles the most exploited people have started by themselves. The recent Garment Factory Working Women’s strike is a case to watch, study and understand. For that matter a struggle to win needs a very systematic, consistent and methodological approach which has room for responses and adhoc activities. But, the long term design and the vision has to be very clear and the leadership has to be highly committed with lived values. There is a dearth of such good leaders.



In this situation what do we do? We need to develop hope and share that hope. It is the hope of a better world. Hope that the injustice could be put to an end. We need to come together, build small units and groups and start thinking of the betterment of others. Thinking how to make this place more humane for us and others. We need to start reaching out to others. Build relationship on trust and see that there is no sense in living alone. We have to travel together not only to reach the goal but also to make the travel meaningful, comfortable and enjoyable. Coming and working together is the only hope! INQULAB ZINDABAD!

(INQULAB ZINDABAD or Long Live the Revolution was first shouted by the revolutionary fighter Bhagat Singh in 1929 after bombing the Central Assembly in Delhi.)

– ಭವ್ಯಾ

## ನನ್ನ ಜೀವನದ ಸ್ಫೂರ್ತಿಯ ಸೆಲೆ

ಇಂದು ನಾನು ಏನಾಗಿರುವೆನೋ ಅದಕ್ಕೆ ಮೂಲ ಕಾರಣಳು ಅವಳೇ. ಒಂದು ವೇಳೆ ಅವಳು ಇಲ್ಲದಿದ್ದರೆ ನಾನು ಈ ಭೂಮಿಯ ಮೇಲೆ ಇರುತ್ತಿರಲಿಲ್ಲ. ನನ್ನ ಬದುಕಿನ ರಥಕ್ಕೆ ಅವಳೇ ಸಾರಥಿ. ಅವಳು ಒಂದು ಚೈತನ್ಯದ ಚಿಲುಮೆ, ಧನಾತ್ಮಕ ಶಕ್ತಿ, ಅವಳು ಎಂದಿಗೂ ಎಲ್ಲಾ ಜೀವರಾಶಿಗಳಿಗೂ ಆಶ್ರಯ, ಆಹಾರ. ಉಸಿರು ನೀಡುವಂತಹ ವಿಶಾಲವಾಗಿ ಬೆಳೆದು ನಿಂತಿರುವ ಒಂದು ಬೃಹದಾಕಾರವಾದ ಆಲದ ಮರದಂತೆ. ಅವಳು ಯಾರಿರ ಬಹುದು ಎಂದು ನಿಮ್ಮ ಮನಸ್ಸಿನಲ್ಲಿ ಬಹುಶಃ ಪ್ರಶ್ನೆ ಮೂಡುತ್ತಿರಬಹುದಲ್ಲವೇ? ಅವಳೇ ನನ್ನ ತಾಯಿ. ಅವಳು ಒಂದು ಹೆಣ್ಣಾಗಿದ್ದರೂ ಯಾರಿಂದಲೂ ಏನನ್ನು ಬಯಸದ ಸ್ವಾಭಿಮಾನಿ ಹೆಣ್ಣು. ಇದರಲ್ಲಿ ಏನು ವಿಶೇಷ ಎಂದು ನಿಮಗನಿಸುತ್ತಿರಬಹುದಲ್ಲವೇ ? ಆದರೆ ಇಲ್ಲಿ ಒಂದು ವಿಶೇಷ ವಿದೆ. ಅದೇನೆಂದರೆ ಅವಳು ಹುಟ್ಟಿದಾಗಿನಿಂದಾಲೂ ಪೋಲಿಯೋ ಕಾಯಿಲೆಗೆ ತುತ್ತಾಗಿರುವ ಅಂಗವಿಕಲೆ. ಅವಳ ಒಂದು ಕೈ ಮತ್ತು ಒಂದು ಕಾಲು ಪೂರ್ತಿ ಸ್ವಾಧೀನ ಕಳೆದುಕೊಂಡಿದೆ. ಬಾಲ್ಯದಲ್ಲಿ ಈಕೆಯನ್ನು ಅವರ ತಂದೆ, ತಾಯಿ ಬಹು ಜೋಪಾನವಾಗಿ ಬೆಳೆಸಿದರು. ಆದರೆ ಮದುವೆ ಯಾದನಂತರ ಇವಳು ಎದುರಿಸಿದ ಸವಾಲುಗಳು ಅಷ್ಟಿಷ್ಟಲ್ಲ.

ಬಾಲ್ಯದಲ್ಲಿದ್ದಾಗ ಎಲ್ಲಾ ಮಕ್ಕಳಂತೆ ನಾನೂ ಕೂಡ ನನ್ನ ಅಮ್ಮನ ಮಡಿಲಲ್ಲೇ ಬೆಳೆದೆ. "ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು" ಎನ್ನುವಂತೆ ನನ್ನ ತಾಯಿಯೇ ನನಗೆ ಮೊದಲ ಗುರು. ಪ್ರತಿ ದಿನ ಶಾಲೆ ಮುಗಿಸಿ ನಾನು ಮನೆಗೆ ಬಂದಾಗ ಇವಳು ನನ್ನ ತರಗತಿಯ ಪಾಠಗಳನ್ನು ನನಗೆ ಅರ್ಥವಾಗುವ ರೀತಿ ವಿವರಿಸಿ ಕಥೆಯ ರೂಪದಲ್ಲಿ ಹೇಳಿಕೊಡುತ್ತಿದ್ದಳು. ಇಲ್ಲಿ ಇನ್ನೊಂದು ವಿಷಯ ನಿಮಗೆ ನಾನು ಹೇಳಲೇ ಬೇಕು ಅದೇನೆಂದರೆ ಅವಳು 10ನೇ ತರಗತಿಯನ್ನೂ ಕೂಡ ಪಾಸು ಮಾಡಿಲ್ಲ. ಇವಳ ಕೈಯಿಂದ ಪಾಠ ಕಲಿತ ನಾನು ತರಗತಿಯಲ್ಲಿ ತುಂಬಾ ಚೆನ್ನಾಗಿ ಓದುವಂತಹ ಕೆಲವೇ ವಿದ್ಯಾರ್ಥಿಗಳ ಗುಂಪಿನಲ್ಲಿ ಇರುತ್ತಿದ್ದೆ.

ನಾನು ನನ್ನ ಜೀವನದ ಬಹುತೇಕ ಎಲ್ಲಾ ವಿಷಯಗಳನ್ನೂ ಕೂಡ ಇವಳ ಬಳಿ ಹಂಚಿಕೊಳ್ಳುತ್ತೇನೆ. ಆಗ ನನ್ನ ಮನಕ್ಕೆ ನೆಮ್ಮದಿ ಸಿಗುತ್ತದೆ. ನನ್ನ ಜೀವನದ ಉತ್ತಮ ಗೆಳತಿ ಕೂಡ ಇವಳೇ. ನಾನು ಸೋತಾಗ ನನಗೆ ಧೈರ್ಯ ನೀಡುತ್ತಾ, ನೊಂದಾಗ ಸಾಂತ್ವನ ಹೇಳುತ್ತ, ಇನ್ನೇನು ನನಗೆ ಈ ಬದುಕೇ ಬೇಡ ಎಂಬ ಜುಗುಪ್ಸೆ ಉಂಟಾದಾಗ ನನಗೆ ಬದುಕನ್ನು ಪ್ರೀತಿಸುವ ರೀತಿಯನ್ನು ತೋರಿಸಿಕೊಟ್ಟವಳು ಇವಳು. ಇವಳಿಗೆ ಒಂದೇ ಆಸೆ ಅದೇನೆಂದರೆ ನಾನು ನನ್ನ ಕಾಲುಗಳ ಮೇಲೆ ನಿಂತು ಸ್ವಾಭಿಮಾನದಿಂದ ಬದುಕ ಬೇಕೆಂಬುದು.




ಇವಳು ಯಾವತ್ತಿಗೂ ಸುಮ್ಮನೆ ಕೂತು ಕಾಲ ಹರಣ ಮಾಡಿಲ್ಲ. ಯಾವಾಗಲೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುತ್ತಾಳೆ. ಉದಾಹರಣೆಗೆ ಅಡುಗೆ ಮಾಡುವುದು, ಬಟ್ಟೆ ಹೊಲಿಯುವುದು, ಮನೆಯ ಎಲ್ಲಾ ಕೆಲಸ ಮಾಡುವುದು. ನಮ್ಮ ಮನೆಯ ಸಂಪೂರ್ಣ ನಿರ್ವಹಣೆ ಕೂಡ ಇವಳ ಮೇಲೆಯೇ ಇದೆ. ನನಗೆ ಇವಳಲ್ಲಿ ಇಷ್ಟವಾದಂತಹ ಒಂದು ಗುಣವೆಂದರೆ ಇವಳು ಯಾವತ್ತಿಗೂ ಇದು ನನ್ನಿಂದ ಸಾಧ್ಯವಿಲ್ಲ ಎಂದು ಹೇಳಿಲ್ಲ. ಯಾವುದೇ ಕೆಲಸವನ್ನಾದರೂ ನಾನು ಮಾಡಬಲ್ಲೆ ಎಂಬಂತಹ ಧನಾತ್ಮಕ ಮನೋಧೋರಣೆಯನ್ನು ಹೊಂದಿರುವುದು. ಇವಳೇ ನನ್ನ ಜೀವನದ ಸ್ಫೂರ್ತಿಯ ಸೆಲೆ. ಇವಳಿಲ್ಲದೆ ನನ್ನ ಬದುಕೇ ಇಲ್ಲ.

ಈ ತಿಂಗಳು ತಾಯಂದಿರ ದಿನಾಚರಣೆಯ ದಿನವನ್ನು (ಮೇ 3ನೇ ಭಾನುವಾರ) ಹೊಂದಿದೆ. ಇಂತಹ ಸಂದರ್ಭದಲ್ಲಿ ನನಗೆ ಜನ್ಮನೀಡಿ ಈ ವಿಶಾಲವಾದಂತಹ ಜಗತ್ತಿಗೆ ನನ್ನನ್ನು ಕರೆತಂದ ನನ್ನ ತಾಯಿಗೆ "ತಾಯಂದಿರ ದಿನಾಚರಣೆಯ ಶುಭಾಶಯಗಳು".

ಅಮ್ಮ ಐ ಲವ್ ಯೂ. . . . . . . . .

- **ರಮೇಶ ಕುಮಾರ.ಡಿ ಬಡಿಗೇರ**

**ಬೇಸಿಗೆ ರಜೆ ಮಜದಿಂದ ನಡೆ**




**ಓದಬೇಕೆಂಬ ಬರೆಯಬೇಕೆಂಬ ಚಿಂತೆಯೆನಗಿಲ್ಲ**
**ಪ್ರಶ್ನೆ ಉತ್ತರಗಳ ಸುಳಿವೇಯಿಲ್ಲ**
**ಶಾಲೆ, ಶಿಕ್ಷಕರ –ಪಾಠ ಪ್ರವಚನಗಳ ಪರಿವೆಯೆನಗಿಲ್ಲ**
**ಮನೆಪಾಠ-ಬಾಯಿಪಾಠಗಳ ಭಯವೇಯಿಲ್ಲ**
**ಸಮವಸ್ತ್ರ, ಶೂ, ಟಾಯ್ಗಳ ಉರುಳುಯೆನಗಿಲ್ಲ**
**ಪೆನ್ನು, ಕಾಪಿ, ಪುಸ್ತಕಗಳ ನೆನಪಿಲ್ಲ**
**ಬೇಸಿಗೆ ರಜೆ ಬಲು ಮಜಾ ನನಗೆ**
**ಹಕ್ಕಿಯಂತೆ ಹಾರಾಡುವೆ, ಕರಡಿಯಂತೆ ಕುಣಿದಾಡುವೆ**
**ಪಟ ಪಟ ಮಾತಾಡುವೆ, ಸರ ಸರ ಓಡಾಡುವೆ**
**ಸ್ನೇಹಿತರೇ ನನಗೆ ಸ್ವರ್ಗ, ಆಟಗಳೇ ನನಗೆ ಪಾಠ**
**ಆಟಗಳಲ್ಲೂ ನಾನು ಕಲಿಯುವೆ, ಕಲಿಯುತ್ತಾ ನಲಿಯುವೆ**
**ತಂದೆ-ತಾಯಿಯ ಮಾತು ನಾ ಮೀರಲಾರೆ**
**ಬೇಸಿಗೆಯ ನಿಯಮಗಳನ್ನು ನಾ ದೂರ ತಳ್ಳಲಾರೆ.**
**ದೂರದ ಪ್ರವಾಸ ನನಗೆ ಬೇಕು, ಪ್ರಾಣಿ-ಪಕ್ಷಿಗಳ ನಾ ನೋಡಬೇಕು**
**ಚಿಣ್ಣರ, ಚಿನ್ಮಯಿಗಳ ಗುಂಪು ನನಗೆ ಬೇಕು**
**ಆ ಗುಂಪಿನಲಿ ನಾ ಮಿಂದು ಏಳಬೇಕು**
**ಗಾಯನ ನೃತ್ಯ ಕಥೆ-ಸಾಂಸ್ಕೃತಿಕ ಲೋಕದೆಡೆ**
**ಬೇಸಿಗೆ ರಜೆ ಮಜದಿಂದ ನಡೆ**

– **ಸುದರ್ಶನ್ ಕೆ.**

## ರಜೆಯ ಒಂದು ನೆನಪು

ರಜೆ ಎಂದರೆ ನಾವು ಯಾವಾಗಲೂ ಬರಮಾಡಿಕೊಳ್ಳಲು ಕಾಯುತ್ತಿದ್ದ ಒಬ್ಬ ಅತಿಥಿ. ಅದರಲ್ಲೂ ಬೇಸಿಗೆಯ ರಜೆಯು ಮಕ್ಕಳಾದ ನಮ್ಮಲ್ಲಿ ಒಂದು ರೀತಿಯ ಪುಳಕವನ್ನೇ ಉಂಟುಮಾಡುತ್ತಿತ್ತು. ಹುಡುಗರೆಲ್ಲಾ ಸೇರಿ ಆಟವಾಡುತ್ತಿದ್ದುದು, ಬೇರೆಯವರ ಮನೆಯಲ್ಲಿ ಇದ್ದ ಮಾವಿನಕಾಯಿಯನ್ನು ಕಿತ್ತು ಹಂಚಿಕೊಂಡು ತಿನ್ನುತಿದ್ದುದು, ಜಗಳಗಳು, ಕೋಪ, ಸ್ನೇಹ, ಪ್ರೀತಿ ಎಲ್ಲವೂ ಜೊತೆಗೆ ಸಾಗುತ್ತಿತ್ತು. ಅದರ ಜೊತೆ ಮನೆಯವರ ಬೈಗುಳಗಳೂ ಕೂಡ, ಬೆಳಗ್ಗೆ ತಿಂಡಿತಿಂದು ಮನೆಬಿಟ್ಟರೆ ಮತ್ತೆ ಮರಳುತಿದ್ದುದು ರಾತ್ರಿಗೇ. ಬಿಸಿಲು ಮಳೆ ಎನ್ನದೆ ಅಲೆಯುತ್ತಿದ್ದ ನಮ್ಮನ್ನು ಮನೆಗೆ ತರುವುದೇ ಒಂದು ಸಾಹಸವಾಗಿತ್ತು ಅವರಿಗೆ.

ಈಗ ಒಬ್ಬ ಹುಡುಗನ ಒಂದು ಮರೆಯಲಾರದ ಬೇಸಿಗೆ ರಜೆಯ ಕಥೆ ಹೇಳಲು ಬಯಸುತ್ತೇನೆ. ಅವನ ಹೆಸರು ಧವನ್. ಈ ಮೇಲೆ ಹೇಳಿದ ಎಲ್ಲಾ ವಿಷಯಗಳೂ ಆತನಿಗೆ ಅನ್ವಯಿಸುತ್ತಿದ್ದವು. ಅವನು ಆಗ ತಾನೆ ತನ್ನ ಆರನೇ ತರಗತಿ ಪರೀಕ್ಷೆ ಮುಗಿಸಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿ ಏಳನೇ ತರಗತಿಗೆ ಹೋಗಲು ತಯಾರಾಗಿದ್ದ. ಮನೆಯ ಸುತ್ತಲಿನ ಎಲ್ಲಾ ಜನರಿಗೂ ಆತನ ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತು, ಅವನು ಸುತ್ತಮುತ್ತಲಿನಲ್ಲಿ ತನ್ನದೇ ಆದ ಸ್ನೇಹಿತರನ್ನು ಹೊಂದಿದ್ದ. ಅವನ ಪಕ್ಕದ ಮನೆಗೆ ಹೊಸದಾಗಿ ಬಂದ ಹೊಸ ಕುಟುಂಬದಲ್ಲಿ ಅವನ ವಯಸ್ಸಿನ ಹುಡುಗನೇ ಒಬ್ಬನಿದ್ದ. ಅವನ ಹೆಸರು ಶಂಕರ. ಒಂಟಿಯಾಗಿದ್ದ ಅವನನ್ನು ಈತ ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡು ಎಲ್ಲರಿಗೂ ಪರಿಚಯಮಾಡಿಸಿದ. ಅಲ್ಲೇ ಹತ್ತಿರದಲ್ಲಿ ಇನ್ನೊಬ್ಬ ಹುಡುಗನ ಮನೆಯಿತ್ತು. ಅವನ ಹೆಸರು ಸತೀಶ. ಅವನು ಮತ್ತು ಅವಳ ಅಕ್ಕ ಶಾಲೆಗೆ ಹೋಗುತ್ತಿರಲಿಲ್ಲ ಮನೆಯವರು ಕೊಡುತ್ತಿದ್ದ ಹಣವನ್ನು ಬಳಸಿಕೊಳ್ಳುತ್ತಾ ಆರಾಮಾಗಿ ಜೀವನ ಸಾಗಿಸುತ್ತಿದ್ದರು. ಧವನ್ ಇವರೆಲ್ಲರನ್ನೂ ತನ್ನ ಗೆಳೆಯರಾಗಿ ಭಾವಿಸಿ ಎಲ್ಲರೊಂದಿಗೆ ಸ್ನೇಹಿತನಾಗಿ ಇರುತ್ತಿದ್ದ.



ಹೀಗಿರುವಾಗ ಆ ಬೇಸಿಗೆ ರಜೆಯಲ್ಲಿ ಧವನ್, ಸತೀಶನ ಮನೆಯಲ್ಲಿ ಆಡುವಾಗ ಅವಳ ಅಕ್ಕನ ಬಳಿ ಬಹಳ ಹಣ ಇದ್ದುದನ್ನು ಕಂಡ ಮತ್ತು ಅವಳು ಆ ಹಣವನ್ನು ಶಂಕರನಿಗೆ ನೀಡಿ ಅವನಿಗೆ ಬೇಕಾದ ಆಟಿಕೆಗಳು, ತಿನಿಸುಗಳನ್ನು ಕೊಡಿಸುತ್ತಿದ್ದಳು, ಧವನ್‌ಗೆ ಇದು ಆಶ್ಚರ್ಯ ಎನಿಸಿತು, ಆದರೂ ಅವರ ಹಣ ಅವರು ಯಾರಿಗೆ ಬೇಕಾದರೂ ನೀಡಬಹುದು ಅಂದುಕೊಂಡು ಸುಮ್ಮನಾದ. ಅವರೊಂದಿಗೆ ಜಾತ್ರೆಗೆ, ಸಿನಿಮಾಗೆ ಹೋಗಿ ರಜೆಯನ್ನು ಮಜವಾಗಿ ಕಳೆಯುತ್ತಿದ್ದ. ಆದರೆ ಸಮಸ್ಯೆಯೊಂದು ಧವನ್ ನ ಮನೆಯಲ್ಲಿ ಬಂದಿತು ಅದೇನೆಂದರೆ ೫೦೦೦ ರೂ ಹಣ ಅವನ ಮನೆಯಲ್ಲಿ ಕಾಣದಾಗಿತ್ತು ಮನೆಯವರೆಲ್ಲಾ ಅದರ ಬಗ್ಗೆ ಚಿಂತಿತರಾಗಿದ್ದರು ಆದರೆ ಧವನ್ ಗೆ ಅದರ ಕುರಿತಾಗಿ ತಿಳಿದಿರಲಿಲ್ಲ. ಪುಟ್ಟ ಹುಡುಗನಾದ ಅವನಿಗೆ ದೊಡ್ಡವರ ಸಮಸ್ಯೆಗಳ ಬಗ್ಗೆ ಚಿಂತಿಸುವ ಅಗತ್ಯವೂ ಇರಲಿಲ್ಲ.

ಹೀಗೆಯೇ ದಿನಗಳು ಸಾಗುವಾಗ ಒಮ್ಮೆ ಶಂಕರ ಮತ್ತು ಧವನ್‌ಗೆ ಸತೀಶನ ಅಕ್ಕ ಹಣವನ್ನು ನೀಡಿ ಬೇಕರಿಯಿಂದ ತಿನಿಸುಗಳನ್ನು ತರಲು ಹೇಳಿದ್ದಳು. ಅದನ್ನು ತೆಗೆದುಕೊಂಡು ಬರುವಾಗ ಶಂಕರನ ತಂದೆ ಎದುರಿಗೆ ಬರುತ್ತಿದ್ದರು ಶಂಕರ ಅವರನ್ನು ನೋಡಿ ಬಚ್ಚಿಟ್ಟುಕೊಳ್ಳಲು ರಸ್ತೆಯ ಬದಿಗೆ ಹೋದ. ಧವನ್ ಕೂಡ ಅವನ ಜೊತೆ ಹೋಗಿ ನಿಂತ. ಆದರೆ ಅದನ್ನು ಗಮನಿಸಿದ ಶಂಕರನ ತಂದೆ ಅವನನ್ನು ಹಿಡಿದುಕೊಂಡು ಒಂದೇ ಸಮನೆ ಹೊಡೆಯಲು ಪ್ರಾರಂಭಿಸಿದರು. ಧವನ್ ಗೆ ಏಕೆ,ಏನು ಎಂಬ ಪ್ರಶ್ನೆಗಳು ತಲೆಯಲ್ಲಿ ಮೂಡಿದರೂ ಕೇಳದೆ ಸುಮ್ಮನಾದ. ಆಗ ಅವರ ತಂದೆ ಅವರಿಬ್ಬರನ್ನು ಮನೆಯಬಳಿ ಕರೆದುಕೊಂಡು

ಬಂದರು. ಧವನ್‌ಗೆ ಅಲ್ಲಿ ಏನಾಗುತ್ತಿದೆ ಎಂಬ ಗೊಂದಲ. ಆದರೆ ಮನೆಯ ಬಳಿ ಬರುತ್ತಲೇ ಅವನ ಕಣ್ಣಿಗೆ ಕಂಡದ್ದು ಪೋಲೀಸ್ ವಾಹನ ಮತ್ತು ಒಂದಿಬ್ಬರು ಪೋಲೀಸ್ ಅಧಿಕಾರಿಗಳು.
ಧವನ್ ಗೆ ಮತ್ತಷ್ಟು ಕುತೂಹಲ. ಪೋಲೀಸರು! ಅದೂ ನಮ್ಮ ಮನೆಯ ಮುಂದೆ !ಏನಾಗಿದೆ? ಏಕೆ ಬಂದಿದ್ದಾರೆ? ಕಣ್ಣಮುಂದೆ ಈ ಪ್ರಶ್ನೆಗಳು.
ಅವನು ತನ್ನ ಮನೆಗೆ ಓಡಿಬಂದ, ಬಂದು ನೋಡಿದರೆ ಅಲ್ಲಿ ಸುತ್ತಮುತ್ತಲಿನ ಜನಗಳು, ವಿಚಾರಣೆಗೆ ಕುಳಿತ ಪೋಲಿಸರು ಅವರ ಮುಂದೆ ತಲೆತಗ್ಗಿಸಿ ಕುಳಿತಿದ್ದ ಸತೀಶನ ಅಕ್ಕ ಮತ್ತು ಸತೀಶ. ಧವನ್‌ಗೆ ಅದನ್ನು ನೋಡುತ್ತಲೇ ಗಾಬರಿ, ಆತಂಕ ಶುರುವಾಯಿತು, ಆ ಸಂದರ್ಭದ ಕಾರಣವೇನೂ ಆತನಿಗೆ ತಿಳಿಯದಾಗಿತ್ತು. ಆತನನ್ನು ನೋಡಿದ ಅವನ ಮನೆಯವರು ಅವನಿಗೆ ಬೈಯಲು ಪ್ರಾರಂಭಿಸಿದರು. ಧವನ್ ನ ಅಕ್ಕ ,ತಾಯಿ ಅವನಿಗೆ ಹಣ ಯಾಕೆ ತೆಗೆದುಕೊಂಡೆ ಎಂದು ಪ್ರಶ್ನಿಸಲು ಪ್ರಾರಂಭಿಸಿದರು. ಈ ಸನ್ನಿವೇಶಕ್ಕೆ ಹೆದರಿ ಆತ ಅಡುಗೆಕೋಣೆಯೊಳಗೆ ಹೋಗಿ ಅಳುತ್ತಾ ನಿಂತ, ಆಗ ಧವನ್ ನ ಅಕ್ಕ ಅಲ್ಲಿಗೆ ಬಂದು ಮನೆಯಲ್ಲಿ ಕಳ್ಳತನವಾಗಿದೆ. ಅದರಲ್ಲಿ ನೀನೂ ಶಾಮಿಲಾಗಿದ್ದ ಹಾಗೆ ಅನಿಸುತ್ತಿದೆ. ಹಾಗೇನಾದರೂ ಮಾಡಿದ್ದರೆ ಈಗ ಪೋಲೀಸರು ನಿನ್ನನ್ನು ಪೋಲೀಸ್ ಸ್ಟೇಷನ್ ಗೆ ಕರೆದುಕೊಂಡು ಹೋಗುತ್ತಾರೆ. ತಪ್ಪುಮಾಡಿದ್ದರೆ ಒಪ್ಪಿಕೋ ಎಂದರು. ಆತನ ತಂದೆ ಅವನನ್ನು ಎದುರಿನಲ್ಲಿ ಕೂರಿಸಿಕೊಂಡು ಅಪರಾಧಿಗೆ ವಿಚಾರಿಸುವಂತೆ ವಿಚಾರಿಸಿದರು. ಆದರೆ ಅ ಪುಟ್ಟ ಹುಡುಗ ಧವನ್ ನ ತಲೆಯಲ್ಲಿ ಇದ್ದ ಪ್ರಶ್ನೆ ಅಲ್ಲೇನಾಗುತ್ತಿದೆ ಎಂಬುದು. ಅವನಿಗೆ ಹೇಳಿಕೊಳ್ಳಲಾಗದಷ್ಟು ದುಃಖವಾಗುತ್ತಿತ್ತು, ನಾನಾವುದೇ ಅಪರಾಧ ಮಾಡಿಲ್ಲ, ನಾ ಅಪರಾಧಿ ಅಲ್ಲ ಎಂದು ಮನಸ್ಸು ಕೂಗಿ ಹೇಳುತ್ತಿತ್ತು ಆದರೆ ಅಲ್ಲಿ ಯಾರಿಗೂ ಈ ಅಮಾಯಕ, ಮುಗ್ಧ ಹುಡುಗನ ದನಿ ಕೇಳುತ್ತಿರಲಿಲ್ಲ.

ಆತ ಪೋಲೀಸರ ಮುಂದೆ ಬಂದು ನಿಂತ. ಕಣ್ಣು ನೀರಿನಿಂದ ತುಂಬಿದ್ದರೂ ಮನಸಿನಲ್ಲಿ ನೋವಿನ ನಡುವೆಯೂ ದೃಢವಾಗಿದ್ದ. ತಪ್ಪೇ ಮಾಡಿಲ್ಲವೆಂದಮೇಲೆ ಭಯವೇಕೆ ಎಂಬ ನಿರ್ಧಾರಕ್ಕೆ ಬಂದಿದ್ದ. ಪೋಲೀಸರ ಯಾವ ಪ್ರಶ್ನೆಗೂ ಅಂಜದೇ ಉತ್ತರಿಸಿದ, ತನಗೆ ತಿಳಿದಷ್ಟೂ ಹೇಳಿದ. ಆದರೆ ಅವನ ಮನಸ್ಸಿನಲ್ಲಿ ಇದ್ದ ಪ್ರಶ್ನೆಯೊಂದೇ. ಶಂಕರ,ಸತೀಶ ಹಾಗೂ ಆತನ ಅಕ್ಕ ಇಲ್ಲೇಕೆ ಅಪರಾಧಿಗಳ ಹಾಗೆ ವಿಚಾರಣೆಗೆ ಕುಳಿತಿದ್ದಾರೆ ಎಂಬುದು. ಅದಕ್ಕೆ ಉತ್ತರ ಸಿಗುವ ಸಮಯ ದೂರವಿರಲಿಲ್ಲ. ನಡೆದದ್ದೇನೆಂದರೇ, ಪಕ್ಕದ ಮನೆಯಲ್ಲಿದ್ದ ಶಂಕರ ಯಾವುದೋ ಸಂದರ್ಭವನ್ನು ಬಳಸಿಕೊಂಡು ಧವನ್‌ನ ಮನೆಯಲ್ಲಿ ಇದ್ದ ೫೦೦೦ ರೂಪಾಯಿಗಳನ್ನು ಕಳ್ಳತನ ಮಾಡಿ ಅದನ್ನು ಸತೀಶನ ಅಕ್ಕನಿಗೆ ನೀಡಿದ್ದ. ಅದನ್ನು ಅವರು ಬಳಸಿಕೊಳ್ಳುತ್ತಾ ಅವನಿಗೂ ಅದರಲ್ಲಿ ಪಾಲನ್ನು ನೀಡುತ್ತಾ ಆರಾಮಾಗಿ ಬೇಕಾದ ಹಾಗೆ ಖರ್ಚನ್ನು ಮಾಡುತ್ತಿದ್ದರು.ಆದರೆ ಧವನ್‌ಗೆ ಈ ಯಾವ ವಿಷಯವೂ ತಿಳಿದಿರಲಿಲ್ಲ. ಯಾವಾಗಲೂ ಸ್ನೇಹಿತರೊಡನೆ ಇರುವಂತೆ ಆತ ಇವರೊಂದಿಗೆ ಇದ್ದ. ಆದುದರಿಂದಲೇ ಇವನ ಮೇಲೂ ಆ ಅಪರಾಧದ ಛಾಯೆ ಬಿದ್ದಿತ್ತು. ಆದರೆ ಆತನ ದೃಢ ಮಾತುಗಳಿಂದಲೇ ಅವನು ಅಪರಾಧಿಯಲ್ಲ ಎಂಬುದು ಸಾಬೀತಾಗಿತ್ತು.ಈ ವಿಷಯ ಪೋಲೀಸರ ಪೂರ್ಣ ವಿಚಾರಣೆಯ ನಂತರ ತಿಳಿದಿತ್ತು.ಕೊನೆಗೆ ನಿಜವಾಗಲೂ ಅಪರಾಧಿಗಳಾಗಿದ್ದ ಶಂಕರ್ ಮತ್ತು ಸತೀಶನ ಅಕ್ಕಳನ್ನು ಪೋಲೀಸರು ಬಂಧಿಸಿ, ನಂತರದಲ್ಲಿ ಬಿಡುಗಡೆ ಮಾಡಿದರು.

ಆ ವಯಸ್ಸಿನಲ್ಲಿ ಅನುಭವಿಸಿದ ಈ ಘಟನೆ ಅವನಿಗೆ ಒಳ್ಳೆಯ ಪಾಠವನ್ನೇ ಕಲಿಸಿತ್ತು. ಹಣಕ್ಕೆ ಎಂದಿಗೂ ಬೆಲೆಕೊಡಬಾರದೆಂಬುದನ್ನು, ಹಣದ ಬಗ್ಗೆ ಪ್ರಾಮಾಣಿಕವಾಗಿರುವುದನ್ನು ಕಲಿಸಿತು. ಹಾಗೆಯೇ ಉತ್ತಮ ಸ್ನೇಹಿತರನ್ನು ಮಾತ್ರ ಹೊಂದುವ, ಆರಿಸುವ ಒಳ್ಳೆಯ ಮಾರ್ಗದಲ್ಲಿ ನಡೆಸುವ, ನಡೆಯುವುದನ್ನು ತಿಳಿಸಿದ ಬಹುದೊಡ್ಡ ಕಾಡುವ ನೆನಪಾಗಿ ನನ್ನ ಬದುಕಲ್ಲಿ ಉಳಿದಿದೆ.ಇಲ್ಲಿ ಧವನ್ ಎಂಬ ಕಾಲ್ಪನಿಕ ಹೆಸರಿನೊಂದಿಗೆ ನನ್ನ ನಾ ಪರಿಚಯಿಸಿಕೊಂಡ ಆ ನನ್ನ ಬೇಸಿಗೆ ರಜೆಯ ಈ ಘಟನೆ ಆಗ ನೋವು ತಂದಿತಾದರೂ, ನನ್ನಲ್ಲಿ ಕಷ್ಟಗಳನ್ನು ಎದುರಿಸುವ ಚೇತನವನ್ನು ಬೆಳೆಸಿದೆ.

– **Rajesh S Mahantmath**

**Remembering summer vacation…**

Every year in the month of April after the school annual examinations got over, we were granted a vacation which lasted for about two months. I can recall the memories of my childhood summer vacations as far back as when I was perhaps in the third or fourth standard. Like other children of my age, I would always be looking forward to the summer vacation to escape the monotony of attending school every morning and having to complete homework every day.

Almost every year during summer I got to visit my mother's maternal home in Basarkod village in Muddebihal block of Vijayapur district. I vividly remember my visits to my maternal grandfather's fields. Thanks to the availability of water in the ancient well, he was able to cultivate vegetables even in summer. The water from the well was drawn in a big vessel with the help of a pair of bullocks and then fed in to the small stone canal. One of my maternal uncles would divert the water to small beds of vegetables.

There was a huge tamarind tree on one corner of the field. My youngest maternal uncle would climb the tree and skillfully collect honey from the bee-hives in the tree. In the afternoon, we would have lunch under the neem tree. I enjoyed eating *'jolada rotti'* with honey. We would then have a brief siesta till the sun became less severe and people resumed their work in the fields. As a child, I would curiously collect different types of wild flowers, leaves and even pebbles and shells and play with my younger sister.





Invariably, during the months of April or May, a grand fair used to be held in the vicinity of the temple for two to three days. It was an occasion for one and all in the village to take a break from their work and participate in the ceremonial procession of the presiding deity (Pawaada Basaveshwara) and pull the chariot. There used to be a number of temporary stalls along both the sides of the main road - selling sweetmeats, coconuts, sugarcanes, cutlery, agricultural tools and accessories, pottery, clothes, footwear, cosmetics etc. In the ground behind the temple, there would be cock-fights, acrobatic shows, wrestling tournaments and other entertainment activities. It was a thrilling experience to watch the local youth wrestling with each other in the mud pitch specially made for the purpose.

In the night, artists from local drama companies would present dramas. All this was a different experience for me who spent most of the year in a town in suburban Mumbai.

I have had the opportunity to visit my native place many times during vacations. And almost every time it has been a different experience. These occasional visits to our native place during vacations helped me to observe village life, understand the local language and bond with my relatives and friends. As I grew older, I gradually understood the hardships and simplicity of villagers and village life. I realized how villagers are closer to nature than city dwellers. I feel that all of us should make it a point to visit our native villages at least once in a while and renew our connection with our roots.

**– ರಾಘವೇಂದ್ರ ಹೇರ್ಳೆ ಜಿ.**

**ಹೇಳು ಓ ಗೆಳೆಯ, ಇನ್ನೆಲ್ಲಿ ಆ ದಿನಗಳು ?**



ಶಾಲೆಯ ಚೀಲ ಅಟ್ಟಕೆ ಎಸೆದು,
ಓದಿಗೆ ಒಂದು ಸಲಾಮು ಹೊಡೆದು,
ಮೋಜು–ಮಸ್ತಿಯ ಕನಸನು ಹೊಸೆದು,
ಕೇಕೆಯ ಹಾಕುತ ಬಯಲಿಗೆ ಇಳಿದು,
ಬಾನಾಡಿಯ ಹಾಗೆ ಗಗನಕೆ ಜಿಗಿದು,
ಉತ್ಸಾಹ–ಉಮೇದುಗಳ ಹರೆಯಕೆ ಬಸಿದು,
ಸಡಗರ–ಸಂಭ್ರಮದಿ ನಲಿಯುತ ಉಲಿದು,
ನಿರೀಕ್ಷೆಯ ಸಾಲುದೀಪಗಳ ಮೆರವಣಿಗೆಯಲಿ ಸಾಗಿದೆವಲ್ಲ
ಹೇಳು ಓ ಗೆಳೆಯ, ಇನ್ನೆಲ್ಲಿ ಆ ದಿನಗಳು?


ಮಾವಿನಕಾಯಿಗೆ ಉಪ್ಪು–ಮೆಣಸು ಸವರಿ,
ಪಚ್ಚುಟ್ಟಿ ಮಾಡಿ ತಿಂದೆವು ನೋಡು ಆ ಸವಿಸವಿ ನೆನಪು,
ಜೋಕಾಲಿಯಾಟದಲಿ ಹಗ್ಗವ ಜೀಕುತ,
ಜೀಕಿದ ಹಗ್ಗವೇ ಕುತ್ತಿಗೆಯ ಸುತ್ತಿ,
ಪ್ರಾಣಾಂತಿಕವಾಗಿ ಹೋಯಿತಲ್ಲ ಆ ಕಹಿಕಹಿ ನೆನಪು,
ಗೇರು ಹಣ್ಣಿನ ತೋಟಕೆ ನುಗ್ಗಿ,
ಕೊಕ್ಕೆಯ ಹಾಕಿ ಬೀಜವ ತೆಗೆದು,
ಮಸಿಮಸಿ ಕೈಯಲಿ ಒಲೆಯಲಿ ಸುಟ್ಟು
ತಿಂದೆವು ನೋಡು ಆ ಹಿಡಿಹಿಡಿ ನೆನಪು,
ಕೇರಿಯ ಮನೆಯ ಕೆರೆಗುಂಡಿಗೆ ನಡೆದು,
ಈಜಲು ಬಾರದೆ ಈಜಲು ಬಿದ್ದು,
ನೊರೆನೊರೆ ನೀರನು ಮುಳುಗುತ–ತೇಲುತ ಕುಡಿದು,
ಕಣ್‌ಕಣ್ ಬಿಟ್ಟು ಅರೆಜೀವವಾದೆವು ನೋಡು,

ಆ ಕರಾಳ–ವಿಕರಾಳ ನೆನಪು,
ಕ್ರಿಕೆಟು, ಕಬಡ್ಡಿ, ಚಿನ್ನಿದಾಂಡು, ಲಗೋರಿ, ಚನ್ನೆಮಣೆ, ಕೋ ಕೋ
ಆಟದ ಕೂಟದ ಗಮ್ಮತ್ತಿನ ಆ ನೂರೊಂದು ನೆನಪು,
ಕಾಡಿಬೇಡಿ ಹಿರಿಯರ ಒಡನೆ,
ಮದುವೆ–ಮುಂಜಿಯ ಊಟಕೆ ಹೋಗಿ,
ಅಡುಗೆಯ ಚಪ್ಪರದಿ ಇಣುಇಣುಕಿ ನೋಡಿದ
ಬಿಸಿಬಿಸಿ ಕಜ್ಜಾಯದ ಆ ರುಚಿರುಚಿ ನೆನಪು
ಎಲ್ಲವೂ ಬರಿ ನೆನಪೇ ಈಗ, ಮುಗಿಯದ ನೆನಪಿನ ದೋಣಿಯ ವಿಹಾರ!
ಹೇಳು ಓ ಗೆಳೆಯ ಇನ್ನೆಲ್ಲಿ ಆ ದಿನಗಳು?

ಹಾಲು ಹಬ್ಬ–ಗೆಂಡಸೇವೆಗೆ ಹುರುಪಲಿ ನಡೆದು
ಜನಜಂಗುಳಿಯಲಿ ಕಳೆದೇ ಹೋಗಿ
ದಿಕ್ಕುಗಾಣದೆ ಅಪ್ಪ–ಅಮ್ಮನ ಹಂಬಲಿಸಿ ಮೊರೆಯಿಟ್ಟ ಆ ಕ್ಷಣಗಳು,
ಊರಿಗೆ ಬಂದ ಜೆಮಿನಿ ಸರ್ಕಸ್ಸಿನ
ಜೋಕರನ ಪಡಿಪಾಟಲಿಗೆ ಹೊಟ್ಟೆ ಹುಣ್ಣಾಗಿ ನಕ್ಕ ಆ ಘಳಿಗೆಗಳು,
ರಾಜ್ ಕುಮಾರ್ ಸಿನಿಮಾಕೆ ಹೋಗಿ,
ಥೇಟರಿನ ಪರದೆಯ ಹಿಂದೆ ನಟನಟಿಯರನು ಹುಡುಕಲು ಹೋಗಿ
ಪೇಚಿಗೆ ಸಿಲುಕಿದ ಆ ಭೋಳೇತನಗಳು,
ರಾತ್ರಿಯ ವೇಳೆ ಸೂಡಿಯ ಹಚ್ಚಿ,
ಯಕ್ಷಗಾನ–ಬಯಲಾಟವ ಕಂಡು ಹಿರಿಹಿರಿ ಹಿಗ್ಗಿ
ಕೂತಲ್ಲೇ ತೂಕಡಿಸಿ ಚುರುಮುರಿ ತಿಂದು, ಚಹಾ ಕುಡಿದು
ಮರುದಿನ ಮಣ್ಣಿನ ಜಡ್ಡಲಿ ಅದೇ ಆಟವ ಪ್ರತಿಸೃಷ್ಟಿಸಿದ
ಆ ರಂಗುರಂಗಿನ ಬಣ್ಣಗಳು,
ಮನೆಯಂಗಳದಿ ಒಣಗಿಸಿದ

ಹಪ್ಪಳ–ಸಂಡಿಗೆ–ಕೊಬ್ಬರಿಗಳಿಗೆ ಕಾಗೆಯ ಕಾಯುತ
ಕಾಗೆಯ ಬದಲಿಗೆ ನಾವೇ ತಿಂದು ಚಪ್ಪರಿಸದ ಆ ಮಧುರ ಸಂದರ್ಭಗಳು,
ಹಾಡಿ–ಹಕ್ಕಲು–ಗುಡ್ಡೆಯ ಹಾದಿಯಲಿ
ತರಹೇವಾರಿ ಹೂ ಹಣ್ಣು ಕಾಯಿಗಳ ಅನ್ವೇಷಣೆಯ
ಆ ಅದ್ಬುತ ಅನುಭವಗಳು,
ಮುಗಿಯದು ಪಟ್ಟಿ ; ಬರಿದಾಗದು ಹಾಳೆ
ಹೇಳು ಓ ಗೆಳೆಯ ಇನ್ನೆಲ್ಲಿ ಆ ದಿನಗಳು?

ಕುಳಿತಲ್ಲಿ, ನಿಂತಲ್ಲಿ, ನಡೆಯಲ್ಲಿ, ನುಡಿಯಲ್ಲಿ
ಎಲ್ಲೆಲ್ಲೂ ಹಳೆಯ ದಿನಗಳ ಕಲಸು ಕಲಸು,
ರೆಕ್ಕೆಗಳು ಗಗನದಲ್ಲಿದ್ದರೇನು, ಬೇರು ಮಾತ್ರ ನೆಲದಾಳಕ್ಕೆ
ಮರಳಿ ಬಾರದ ಅಮೃತಘಳಿಗೆಯ ಮೊಗೆಮೊಗೆದು ಕೊಡುತಿದೆ,
ಮತ್ತೆ ಮಗುವಾಗುವ ಸಾರ್ಥಕ್ಯವ ಕರುಣಿಸಿದೆ,
ಜೀವನಪ್ರೀತಿಗೆ, ಬಾಂಧವ್ಯದ ಬೆಸುಗೆಗೆ ಹೊಸ ಭಾಷ್ಯವ ಬರೆದಿದೆ,
ಬದುಕಿನ ಬೆಡಗಿನ ಓಕುಳಿಯಾಟಕೆ ಹೊಸ ಮೆರುಗು ತಂದಿದೆ,
ಆದರೂ ಮತ್ತದೇ ಬೇಸರ; ಮುಗಿಯದ ಕನವರಿಕೆ,
ಹೇಳು ಓ ಗೆಳೆಯ ಇನ್ನೆಲ್ಲಿ ಆ ದಿನಗಳು?



**– ರಾಮಚಂದ್ರ ಭಟ್**

## ಬೇಸಿಗೆ ರಜಾ

ನಾವು ಸಣ್ಣವರಿದ್ದಾಗ ಬೇಸಿಗೆ ರಜೆಯಲ್ಲಿ ಅಜ್ಜಿ ಮನೆಗೆ ಹೋಗುವ ಪರಿಪಾಠವಿತ್ತು. ಅಜ್ಜಿ, ಅತ್ತೆ ಮಾವಂದಿರೂ ಅಷ್ಟೆ; ನಮಗಾಗಿ ದಾರಿ ಕಾಯುತ್ತಿದ್ದರು. ಅಜ್ಜಿ ಮನೆಗೆ ಹೋಗುವ ಹುಮ್ಮಸ್ಸಿನೊಂದಿಗೆ ಉಪ್ಪಿನಂಗಡಿ ವರೆಗೆ "ಶಂಕರ್ ವಿಠಲ್ ಮೋಟಾರ್ ಸರ್ವಿಸ್"ಬಸ್ಸಿನಲ್ಲಿ ಪ್ರಯಾಣಿಸುವ ಗೌಜಿ–ಗಮ್ಮತ್ತು. "ಬಸ್ಸು ತುಂಬಾ ಹೊತ್ತು ಹಾಗೆಯೇ ಚಲಿಸುತ್ತಲೇ ಇರಲಿ…" ಎನ್ನುವ ಆಸೆ. ಆದರೆ, ನಮ್ಮ ಆಸೆಗೆ ವಿರುದ್ಧವಾಗಿ ಬಸ್ಸು ಕೇವಲ ಅರ್ಧ ಗಂಟೆಯಲ್ಲೇ ಉಪ್ಪಿನಂಗಡಿಗೆ ತಲುಪುತ್ತಿತ್ತು. ಬಸ್ಸಿನಲ್ಲೂ ಸ್ವಲ್ಪ ಹೊತ್ತು ಒಂದು ಸಣ್ಣ ಮಟ್ಟಿನ ಜಗಳ ಅಣ್ಣ–ತಮ್ಮಂದಿರು ಮತ್ತು ಅಕ್ಕ–ತಂಗಿಯರಾದ ನಮ್ಮ ನಡುವೆ ಮೌನವಾಗಿ ನಡೆಯುತ್ತಿತ್ತು – ಬಸ್ಸಿನ ಕಿಟಿಕಿ ಬದಿಯಲ್ಲಿ ಆಸೀನರಾಗುವ ತವಕದಲ್ಲಿ. ಆದರೆ ದೊಡ್ಡಮಟ್ಟಕ್ಕೆ ಹೋಗುವಂತಿಲ್ಲ. ಕಾರಣ: ನಮ್ಮ ಅಕ್ಕಪಕ್ಕದಲ್ಲಿ ಬೇರೆಯವರಿದ್ದುದು ಸ್ವಲ್ಪ ಅಡಚಣೆ. ಒಂದೊಮ್ಮೆ ಮಕ್ಕಳಾದ ನಮ್ಮನ್ನು ದೊಡ್ಡವರು ದರ್ಪದಿಂದ ಎಬ್ಬಿಸಿ ತಾವು ಕುಳಿತುಕೊಳ್ಳುವುದೂ ಇತ್ತು. ಮೂಗಿನ ವರೆಗೆ ಕೋಪಬಂದರೂ ಶಕ್ತಿ ಕಡಿಮೆ ಇದ್ದದ್ದರಿಂದ ಏನೇನೂ ಸಾಗುತ್ತಿರಲಿಲ್ಲ.




ಉಪ್ಪಿನಂಗಡಿಯಿಂದ ಮತ್ತೆ ಕಾಲ್ನಡಿಗೆಯಲ್ಲಿ ಸುಮಾರು 2 ಮೈಲಿ ನಡೆಯಬೇಕು. ಆಗಿನ ಕಾಲದಲ್ಲಿ ನೇತ್ರಾವತಿ ನದಿಯಲ್ಲಿ ನೀರು ಸದಾಕಾಲ ಹರಿಯುತ್ತಿತ್ತು. ದೋಣಿಯಲ್ಲಿ ನದಿ ದಾಟುವುದೂ ನಮಗೊಂದು ಪ್ರಮುಖ ಆಕರ್ಷಣೆ. "ಕಡವಿನ ಬಾಗಿಲಿನಿಂದ" ನೀರಿನ ಹರಿವಿಗೆ ಸಮನಾಗಿ ದೋಣಿ ಅಡ್ಡಕ್ಕೆ ಸಾಗುವಾಗ ಆಗುವ ಭಯ ಮಿಶ್ರಿತ ಖುಶಿ ಈಗ ಕೇವಲ ನೆನಪು. ನೇತ್ರಾವತಿಯಲ್ಲಿ ನೀರೂ ಇಲ್ಲ, ದೋಣಿಯೂ ಕಾಣೆ. ಮತ್ತೆ ದೋಣಿ ನಡೆಸುವವರ ಮಾತೆಲ್ಲಿ?

ಅಜ್ಜಿ ಮನೆಗೆ ಹೋಗುವಾಗ ಒಂದು ನಾಲ್ಕು ದಿವಸಗಳ ಮಟ್ಟಿಗೆ ಎನ್ನುತ್ತಲೇ ಮನೆಯಿಂದ ಹೊರಡುವುದು. ಆದರೆ, ಅಲ್ಲಿಗೆ ಹೋದಮೇಲೆ ಯಾವುದೂ ನಮ್ಮ ಹಿಡಿತದಲ್ಲಿಲ್ಲ. ಆ ಆಕರ್ಷಣೆಯೇ ಹಾಗೆ. ಮಕ್ಕಳು ಮನೆಯಲ್ಲಿರದ ಕಾರಣ ಅಪ್ಪ ಬೇಸರ ಬಂದು, "ಒಂದು ದಿಕ್ಕಂಗೆ ಹೋದರೆ… ಇತ್ಲಾಗಿನ ಲೋಕವೇ ಇಲ್ಲೆ" ಎಂದು ಬೈಯುವ ಬಗ್ಗೆ ನಮಗೆ ವಾಪಾಸ್ಸು ಮನೆಗೆ ಬಂದ ಮೇಲೆ ಅಮ್ಮನಿಂದ ವಾರ್ತೆ ಸಿಗುತ್ತಿತ್ತು. ಆದರೆ, ಅಪ್ಪನ ಕೋಪ ನಮ್ಮ ಮುಖ ಕಂಡೊಡನೆಯೇ ಮಾಯವಾಗುತ್ತಿತ್ತು.

ನಮಗೆ ಮನೆಯಲ್ಲಿಲ್ಲದ ಯಾವತ್ತೂ ಸ್ವಾತಂತ್ರ್ಯ ಅಜ್ಜಿ ಮನೆಯಲ್ಲಿ ಸಿಗುತ್ತಿತ್ತು. "ಲಾಗ ಸಾಕು; ಮಟ ಮಟ ಮಧ್ಯಾಹ್ನ ಆತು, ಊಟಕ್ಕೆ ಬನ್ನಿ"ಎಂದು ಅಜ್ಜಿಯೋ ಅತ್ತೆಯೋ ಕರೆದ ಮೇಲಷ್ಟೇ ನಮಗೆ ಇಹ ಲೋಕದ ಪರಿವೆ. ಮಾವು, ಗೇರು, ಹಲಸು ಗಳ ಸಮಾರಾಧನೆ. ಹೊಳೆ ಮಾವು, ಕಟ್ಟದ ಹಲಸು ಇತ್ಯಾದಿ ವೈವಿಧ್ಯಗಳು. ರಾತ್ರಿ ಮಲಗುವ ಮೊದಲು ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಅಜ್ಜಿಯಿಂದ 'ದಶಮೂಲಾರಿಷ್ಠ' ಹಂಚೋಣ. ಅದನ್ನು ಸೇವಿಸಿಯೇ ನಿದ್ದೆ ಮಾಡಬೇಕು. ಅಂತೂ ರಜೆ ಮುಗಿಯುವಾಗ ಬೇಸರದ ಮಧ್ಯೆಯೂ ಒಂದು ಸಣ್ಣ ಸಂತೋಷ ಇರುತ್ತಿತ್ತು. ಮರು ಪ್ರಯಾಣದಲ್ಲಿ ಮತ್ತೊಮ್ಮೆ ದೋಣಿ… ಶಂಕರ್ ವಿಠಲ್ ಬಸ್ಸು…


- **ಯತಿರಾಜ್ ಶರ್ಮ**

**ವೈ ಡು ಐ ರೈಟ್?**

**(ಕಳೆದ ಸಂಚಿಕೆಯಿಂದ)**

ಲೇ ಸೋಮ ಬರೀಬೇಕೋ! ಹೌದು ಬರೀಬೇಕು. ನಾ ಓದ್ಲಿಕ್ಕಷ್ಟೆ. ನನಗೆ ಅದಕ್ಕಿಂತ ಮತ್ತೊಂದು ಕಾರಣ ಕಾಣ್ತಿಲ್ಲ. ನೀ ಓದ್ಲಿಲ್ಲ ಅಂದರೂ ಪರ್ವಾಇಲ್ಲ. ನಾ ಬರೆಯೋದು ನನಗಷ್ಟೇ. ಬರೆಯೋದು ನನಗೆ ತೃಪ್ತಿ ತರೋದಿಲ್ಲ. ಬದಲಾಗಿ ನನ್ನಿಂದ ನನ್ನನ್ನೇ ಬೇರ್ಪಡಿಸತ್ತೆ. ಭೂತ, ವರ್ತಮಾನಗಳ 'ನಾನು' ಅನ್ನೋ ಬಲೆಯಿಂದ ನನ್ನನ್ನ ಬಿಡಿಸತ್ತೆ. ನಾನು ನಾನೇ ಅನ್ನೋದನ್ನ ಮರೀತೀನಿ. ನನ್ನ ಜೀವನವೆಲ್ಲಾ ಹೊಸ ಅರ್ಥ ಕಟ್ಟಿಕೊಳ್ಳತ್ತೆ. ಎಷ್ಟು ವಿಚಿತ್ರ ನೋಡು, ವಿಷಯವೆಲ್ಲಾ ಹಳೇದೇ. ಆದರೆ ಅದನ್ನೇ ಬರೀತಲೂ ನಾನು ಹೊಸಬನಾಗ್ತಾ ಹೋಗ್ತೇನೆ. ಇದಕ್ಕೆ ಕಾರಣ ನನಗೂ ತಿಳೀದು. ಈ ರೀತಿ ಬರೀಬೇಕಾದ್ರೆ ಆ ಜೀವನವೆಲ್ಲಾ ಬೇರೆ ಯಾರೋ ನಡೆಸ್ತಾ ಇದ್ದ ಹಾಗೂ, ಅವೆಲ್ಲವನ್ನೂ ಗಂಭೀರವಾಗಿ ದಾಖಲಿಸಿ, ವಿಮರ್ಶಿಸೋ ಜವಾಬ್ದಾರೀನ ನಾನು ಹೊತ್ತಹಾಗೂ ಅನ್ನಿಸೋದೆ ಕಾರಣವಿದ್ದಿರಬೋದೇನೋ. ನಾನೊಬ್ಬ ವಿಮರ್ಶಕ ಇಲ್ಲಿ. ನಾನೊಬ್ಬ ಇತಿಹಾಸಕಾರ ಇಲ್ಲಿ.

ಈ ಬರೆಯೋದೇಕೆ ಅನ್ನೊ ಪ್ರಶ್ನೆ ಉದ್ಭವಿಸೋದಾದ್ರು ಹೇಗೆ ಅನ್ನೋದೇ ನಿನ್ನ ಅನುಮಾನವಿತ್ತಲ್ಲ? ಆ ರೀತಿ ಯಾವುದೋ ಉತ್ತರದ ಅಪೇಕ್ಷೇಲಿ ನನ್ನೆಡೆ ನೋಡ್ಬೇಡ. ಯಾಕೆಂದ್ರೆ ನನ್ನದು ಅದೇ ಮುಖಭಾವನೆ-ನಿನ್ನ ಕಂಗಳಲ್ಲಿ ಕಾಣ್ತಿದೆ. ನನಗೂ ಅದು ಪ್ರಶ್ನೆಯೇ. ನಾನು,ನೀನು ಉತ್ತರಗಳನ್ನ ಊಹಿಸಬೋದಷ್ಟೆ. ಆದರೆ ಯಾರ ಮನಸ್ಸಲ್ಲೂ ನಾನಾಗ್ಲೀ ನೀನಾಗ್ಲಿ ಇಣುಕಲಿಕ್ಕೆ ಸಾಧ್ಯವೇ ಇಲ್ಲವಾದ್ದರಿಂದ ಇದೇ ಕಾರಣ ಅಂತ ಸ್ಪಷ್ಟವಾಗಿ ಹೇಳ್ಳಿಕ್ಕೆ ಬರೋದಿಲ್ಲೋ. ಉದಾಹರಣೆಗೆ, ಒಬ್ಬ ವ್ಯಕ್ತಿ ಸಾಧಾರಣವಾಗಿ ಬರೀತಿದಾನೆ ಅಂತ ಇಟ್ಕೊ -ಕ್ಷಮಿಸು ನಾನು ಸಾಧಾರಣ ಅನ್ನೋ ಪದವನ್ನ ಬಳಸ್ಲೇಬೇಕಾಗಿದೆ. ಈ ಪದ ಇದ್ಯಲ್ಲ ಇದೊಂದು ರೀತಿ ರಿಲೇಟೀವ್ ವರ್ಡ್, ಆ ರಿಲೇಟಿವಿಟಿಯೇ ಸಮಸ್ಯೆಗೆಲ್ಲಾ ಕಾರಣ. ಯಾಕೆ ಅಂದ್ರೆ, ಆತ ಸುಮ್ಮನೆ ಮನಸೋ ಇಚ್ಚೆ ಬರೀತಾ ಹೋದಂಗೂ, ಜನಗಳಿಗೆ ಅದು ಹಿಡಿಸದೇ ಇದ್ದ ಪಕ್ಷದಲ್ಲಿ, 'ಛೇ ಇವ್ನು ಯಾಕಾದ್ರೂ ಬರೀತಾನೋ' ಅಂತ ಬೈದುಕೊಳ್ಳದೇ ಇರ್ತಾರೆಯೇ? ಅಷ್ಟಕ್ಕೂ ಅವರೇಕೆ ಇವನದ್ದನ್ನ ಓದಬೇಕು? ಹಾಗಿದ್ರೆ ಸಮಸ್ಯೆ ಉದ್ಭವವಾಗ್ತಿರೋದು ಆ ಮನುಷ್ಯನಿಂದಲೇ. ಲಾಜಿಕಲ್ ಆಗಿ ನೋಡಿದ್ರೆ, ಆತ ಓದಿ ಅಂತ ಹೇಳದೇ ಇರೋವರೆಗೂ ಇವ್ನೇಕೆ ಬರೀತಾನೆ ಅನ್ನೋ ಪ್ರಶ್ನೆ ಉದ್ಭವವಾಗೋದಿಲ್ಲ. ಹಾಗಂತ ಎಲ್ಲಾ ಸಂದರ್ಭದಲ್ಲೂ ಸಮಸ್ಯೆ ಅವ್ನಿಂದಲೇ ಅಂತಲ್ಲ, ಕೆಲವರು ಆತನನ್ನ ಅಪಹಾಸ್ಯಕ್ಕೆ ಗುರಿಮಾಡಲೋ/ ಅಥವಾ ಯಾವುದೋ ಮಡಿವಂತಿಕೆಯಿಂದಲೋ ಅಥವಾ ಈರ್ಷ್ಯೆಯಿಂದಲೋ ಆ ಪ್ರಶ್ನೆಯನ್ನ ಕೇಳಬೋದು. ಏನಂತೀಯ? ತಮಾಷೆಯಾಗಿದೆ ಅಂದ್ಯ. ಇದೇನು ಅಷ್ಟೇನೂ ಗಂಭೀರವಾದ ಉತ್ತರವಲ್ಲ. ಯಾಕೆ



ಅಂದ್ರೆ ಸಂಪೂರ್ಣ ಜೀವನ ನಾವು ಅನ್ಯರಿಗೋಸ್ಕರವೇ ಬದುಕೋ ಹಾಗೆ ಕಾಣತ್ತೆ. ನಮ್ಮ ಜೀವನ ಅಲ್ವಾ? ಬರೆಯೋದೇತಕ್ಕೆ ಅನ್ನೋ ಪ್ರಶ್ನೆ ಗಂಭೀರವೆನಿಸೋದು ಒಬ್ಬ ವ್ಯಕ್ತಿ ಅದನ್ನ ತನಗೇ ತಾನು ಕೇಳಿಕೊಂಡಾಗ. ಯಾಕೆ ಅಂತ ಆಲೋಚಿಸು...... ಯೆಸ್, ಯು ಆರ್ ರೈಟ್! ಆತ ಆ ಪ್ರಶ್ನೆಯನ್ನ ತನಗೆ ತಾನೇ ಕೇಳಿಕೊಳ್ತಾ ಇದಾನೆ ಅಂದ್ರೆ, ತನ್ನ ಬರವಣಿಗೆ ನಿಷ್ಪ್ರಯೋಜಕವೇ ಅನ್ನೋ ಅನುಮಾನ, ಗೊಂದಲ ಆತನ ಮನದಲ್ಲಿ ಮೂಡಿದ್ದಿರಲೇಬೇಕು. ಅದು ಬಹಳ ಗಂಭಿರವಾದ್ದು. ಯಾಕಂದ್ರೆ ಅದಕ್ಕೆ ಉತ್ತರ ಹುಡುಕೋದು ವಿಪರ್ಯಾಸವೇ. ಯಾಕೆ ನೋಡಿಲ್ಲಿ -ಉತ್ತರದ ಹುಡುಕಾಟದಲ್ಲಿಳಿದ್ರೆ, ನಾನು ಯಾರಿಗೋ, ಏನಕ್ಕೋ ನನ್ನ ಬರವಣಿಗೆಗಳ ಉದ್ದೇಶವನ್ನ ಅರಿವು ಮಾಡಿಸೋ

ಪ್ರಯತ್ನದಲ್ಲಿರೋ ಹಾಗೆ ಅನ್ನಿಸತ್ತೆ. ಉತ್ತರ ಹುಡುಕದೇ ಇದ್ರೆ ಪ್ರಶ್ನೆ ಪ್ರಶ್ನೆಗಳಾಗಿ ಬೆಳೆದು, ದೊಡ್ಡ ವಲ್ಮೀಕವಾಗತ್ತೆ. ಜಯರಾಮ ಹೇಳೋಹಾಗೆ ಬರವಣಿಗೆಯೇ ಉಸಿರಾಗಿರಿಸಿಕೊಂಡವ್ನಿಗೆ ಅದು ನಿಷ್ಪ್ರಯೋಜಕವೆನಿಸಿದಾಗ ಅವನಿಗೆ ಉಸಿರೇ ಬೇಡವೆಂದೆನಿಸತ್ತೆ. ಇದು ಎಷ್ಟು ಕಾಂಟ್ರಾಡಿಕ್ಟರಿಯಾಗಿದೆ ನೋಡು. ಬರವಣಿಗೆಯೇ ಉಸಿರಾಗಿತ್ತೆಂದ್ರೆ, ಅವನಿಗೆ ಅಷ್ಟೂ ದಿನ ಬರೆಯೋದೇತಕ್ಕೆ ಅನ್ನೋದಕ್ಕೆ ಕಾರಣವಿತ್ತು. ಒಡನೆಯೇ ಅದು ಸರಿಯಲ್ಲೆಂದು ತೋರುತ್ತೆ. ಈಗ ಅವ್ನಿಗೆ ಯಾವುದೇ ಕಾರಣ ಇಲ್ಲ. ಅಷ್ಟೂ ದಿನ ಆತನ ಬರವಣಿಗೆಗಳಿಗೆ ಜೀವ ತುಂಬ್ತಿದ್ದ ಕಾರಣವೇ ಈಗ ಅವನ ಜೀವ ತೆಗೀತಿದೆ.

ಬರೆಯೋದು ಕೇವಲ ಒಂದು ಕ್ರಿಯೆಯಲ್ಲ. ಅಥವಾ ನಮ್ಮ ಭಾವನೆಗಳನ್ನ ಅತ್ಯಂತ ಶಕ್ತಿಶಾಲಿಯಾಗಿ ಹೊರಹಾಕೋ ಮಾಧ್ಯಮವಷ್ಟೇ ಅಲ್ಲ. ಬರವಣಿಗೆ ಅನ್ನೋದು ನಿನ್ನ ಅಂತರಂಗದ ಪ್ರತಿಬಿಂಬ. ಬರೆಯೋದೇತಕ್ಕೆ ಅನ್ನೋದು ಅಲ್ಲಷ್ಟೇ ತಿಳಿಯೋದು. ಆಹ್! ನೀನು ಯೋಚಿಸ್ಲಿಕ್ಕೆ ಶುರು ಮಾಡಿದ್ಯಲ್ಲೋ ಮಾರಾಯ. ಶಾಭಾಸ್... ! ಹೌದು, ನಾನು ಹೆಸರಿಗೋಸ್ಕರನಾದ್ರು ಬರೀಬೋದು, ಹಣಕ್ಕಾಗಿಯಾದ್ರೂ, ಅಥವಾ ನನ್ನನ್ನ ಅರಿಯಲೆಂದೋ. ಇದರಲ್ಲಿ ಯಾವುದೂ ಶ್ರೇಷ್ಠವಲ್ಲ, ಯಾವುದೂ ತಪ್ಪಲ್ಲ. ಆದರೆ ಉದ್ದೇಶವನ್ನ ಮರೆಮಾಚಿ ಬರೆಯೋದಿದೆಯಲ್ಲ, ಅದು ಒಂದು ರೀತಿಯ ಕಪಟತನ. ನನಗೆ ಪ್ರಶಸ್ತಿಬೇಕೆಂದೇ ನಾ ಬರೆಯೋದು ಅಂತ ಹೇಳಿ ಬರೆಯೋವ್ನನ್ನ ನಾನು ಬೆನ್ನು ತಟ್ಟಿ ಪ್ರೋತ್ಸಾಹಿಸ್ತೇನೆ. ತನ್ನ ಆತ್ಮತೃಪ್ತಿಗೆ ಅಂತ ಹೇಳಿಕೊಳ್ತಾ, ಹೆಸರು ಗಳಿಸಿದ ಮತ್ತೊಬ್ಬ ಬರಹಗಾರನನ್ನ ಒಳಗೊಳಗೆ ದ್ವೇಷಿಸೋವ್ನನ್ನ ಕಂಡರೆ ನಿನಗೂ ಪಾಪವೆನ್ನಿಸ್ಬೋದೇನೋ -ಅದೆಷ್ಟು ಮುಖವಾಡಗಳನ್ನು ಹಾಕಿಕೊಳ್ತಾ ಜೀವನ ನಡೆಸ್ಲಿಕ್ಕೆ ಕಷ್ಟ ಪಡ್ತಾನೆ ಅಂತ, ಅಲ್ವಾ?

ಹೇಳಿದ್ನಲ್ಲ ಜೀವನ ಇಷ್ಟೆ! ನಮ್ಮ ನಡವಳಿಕೆ, ನಂಬಿಕೆ, ಆಚರಣೆ ಎಲ್ಲಾ ಕಾಲಘಟ್ಟದ ನಿರ್ಣಯದನುಗುಣಗಳಷ್ಟೇ. ಹಾ ಹಾ! ಹೌದು. ನೀ ಹೇಳಿದ್ದು ನಿಜ. ಯಾವ ಕಾಲಘಟ್ಟದಲ್ಲಾದರೂ ಒಬ್ಬ ವ್ಯಕ್ತಿಗೆ ಸುಖ, ನೆಮ್ಮದಿ ತರೋ ವಿಚಾರ ಆತನ ದೃಷ್ಟೀಲಿ ಸರಿಯೇ! ಹಾಗೆ ಅನ್ನಿಸೋದ್ರಿಂದಲೇ ಕಪಟಿಗಳು ಇನ್ನೂ ಇರೋದು! ಅದೂ ತಪ್ಪಿಲ್ಲ ಬಿಡು- ಅದು ಬೇರೆ ತರಹದ ಫಿಲಾಸಾಫಿಕಲ್ ಕ್ವೆಶ್ಚನ್. ನಿನ್ನ ಮುಖ ನೋಡಿದ್ರೆ, ಆಗಲೆ ಹೊಟ್ಟೆ ಭರ್ತಿ ಮೊಸರನ್ನ ತಿಂದು ಜೋಂಪು ಹಿಡಿಯೋ ಸ್ಥಿತಿಯಲ್ಲಿದ್ದಾಗಿದೆ. ಹಾ ಹಾ! ಕ್ಷಮಿಸಪ್ಪಾ! ಅಕಸ್ಮಾತ್ತಾಗಿ ನೀನೇಕೆ ಬರೀತಿಲ್ಲೆಂದು ಅಥವಾ ನೀನೇಕೆ ಬರೀತಿ ಎಂದೋ ಇನ್ನು ಯಾರನ್ನೂ ಕೇಳಲಿಕ್ಕೆ ಹೋಗಬೇಡ. ಈ ರೀತಿ ಒಂದು ಮೊಳೆ ಹೊಡೆಸಿಕೊಳ್ಳೋ ಸೆಶನ್ ಆಗ್ಬಿಡತ್ತೆ!

**– ಪೆರಿ**

## ರಜಾ ಶಿಬಿರ – ಅಳಿದುಳಿದ ತರಬೇತುದಾರನ ಟಿಪ್ಪಣಿಗಳು

### ದಿನ – 12. ರಾತ್ರಿ 9.30

ಇವತ್ತು ತುಂಬಾ ಖುಷಿ ಆದ ದಿವಸ. ಬೇಸಿಗೆ ಶಿಬಿರ ಮುಗಿಯಿತು. ಮಕ್ಕಳು ತುಂಬ ಖುಷಿಪಟ್ಟರು. ತುಂಬಾ ಮಕ್ಕಳು ಇಂತಹ ಶಿಬಿರ ಅಕ್ಟೋಬರ್ ರಜೆಯಲ್ಲಿ ಮಾಡಲು ಸೂಚಿಸಿದರು. ನಾನು ಸುಸ್ತಾಗಿದ್ದೆ. ಈ ಹನ್ನೆರಡು ದಿವಸದ ಶಿಬಿರವನ್ನು ಒಬ್ಬನೇ ಮಾಡಬಾರದಿತ್ತು, ತರಬೇತುದಾರರ ತಂಡ ಚೆನ್ನಾಗಿರಬೇಕಿತ್ತು, ಹೆಚ್ಚು ಜನರು ಈ ಶಿಬಿರದಲ್ಲಿ ಭಾಗವಹಿಸಬೇಕಿತ್ತು, ಇತ್ಯಾದಿಯಾಗಿ ನನಗೆ ಯೋಚನೆ ಆಗುತ್ತಿತ್ತು. ಹಾಗೆ ನೋಡಿದರೆ ಸಾಕಷ್ಟು ಜನ ತರಬೇತುದಾರರು ಬಂದಿದ್ದರು. ಕೆಲವರದ್ದು ಚೆನ್ನಾಗಾಯ್ತು. ಕೆಲವರದ್ದು ಚೆನ್ನಾಗಾಗಿಲ್ಲ. ಒಟ್ಟಿನಲ್ಲಿ ಕೆಲವರ ವಿಷಯ ನಮ್ಮ ಒಟ್ಟು ಶಿಬಿರದ ಚೌಕಟ್ಟಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಮುಂದಿನ ಶಿಬಿರಗಳನ್ನು ಯೋಜಿಸುವಾಗ ತರಬೇತುದಾರರ ತಂಡ ಒಟ್ಟಿಗೆ ಕೂತು ತರಬೇತಿಯನ್ನು ಯೋಜಿಸಬೇಕು ಎನ್ನಿಸಿತು. ಪ್ರತಿ ತರಬೇತಿದಾರರು ತಮ್ಮ ವಿಷಯವನ್ನು ಹೇಗೆ ನಿಭಾಯಿಸಬೇಕು, ಅವನ್ನು ಒಂದಕ್ಕೊಂದು ಹೇಗೆ ಬೆಸಯಬೇಕು ಎಂಬುದನ್ನು ಸರಿಯಾಗಿ ಚರ್ಚಿಸಬೇಕು ಅನ್ನಿಸಿತು. ಕೆಲವು ಒಪ್ಪಿಕೊಂಡ ತರಬೇತುದಾರರು ಬರಲಿಲ್ಲ. ಅದು ಸ್ವಲ್ಪ ಸಮಸ್ಯೆ ಆಯಿತು. ಈ ಸಮಸ್ಯೆ ತಪ್ಪಿಸಲು ನಾವು ಮೊದಲಿಗೆ ಪ್ರತಿ ಒಂದು ಸೆಷನ್ ಗೆ ಪರ್ಯಾಯ 'ಪ್ಲಾನ್ ಬಿ' ಮಾಡಿ ಇಟ್ಟುಕೊಳ್ಳಬೇಕಿತ್ತು ಅನ್ನಿಸಿತು. ತರಬೇತುದಾರರು ಬಂದಾಗ ಹಿಂದೆ ಏನು ನಡೆಯಿತು, ಮುಂದೆ ಏನು ನಡೆಯಲಿದೆ, ಅವರು ಏನು ಮಾಡಿದರೆ ಉತ್ತಮ ಎಂಬ ಒಂದು ಬ್ರೀಫಿಂಗ್ ಕೊಡುವುದು ತುಂಬಾ ಮುಖ್ಯ ಅನ್ನಿಸಿತು. ತರಬೇತುದಾರರ ತಯಾರಿ ತರಬೇತುದಾರರ ಯಶಸ್ಸಿಗೆ ಅಡಿಪಾಯ ಎಂದು ನನಗೆ ಅನ್ನಿಸುತ್ತದೆ.




### ದಿನ – 6. ರಾತ್ರಿ 10.00

ಇವತ್ತಿನ ದಿನ ನನ್ನನ್ನು ತುಂಬಾ ಚಿಂತನೆಗೆ ಹಚ್ಚಿದ ದಿನ. ಮಕ್ಕಳು ಖುಷಿಯಲ್ಲಿ ಇದ್ದಾರೆ. ಆದ್ರೆ ಇವತ್ತು ಮಧ್ಯಾಹ್ನ ನಡೆದ ಒಂದು ಘಟನೆ ನನಗೆ ಸ್ವಲ್ಪ ಬೇಸರ ತಂದಿದೆ. ನಾವು ಯೋಜಿಸಿರುವ ಒಂದು ಚಟುವಟಿಕೆಯನ್ನು ಕೈಬಿಟ್ಟು ಮಕ್ಕಳು ಆಟ ಆಡಿಸಲು ಕೇಳಿಕೊಂಡರು. ನಾವು ಕಡೆಗೆ ಅವರ ಬೇಡಿಕೆಯಂತೆ ಆಟ ಆಡಿಸಿದೆವು. ಆದ್ರೆ ಈ ಪ್ರಕರಣ ನಮ್ಮ ತರಬೇತುದಾರರಲ್ಲಿ ಒಂದು ಜಗಳವನ್ನು ಹುಟ್ಟು ಹಾಕಿತು. ಯೋಜನೆಯಲ್ಲಿ ಇದ್ದುದನ್ನೇ ಮಾಡಬೇಕು ಎಂದು ಕೆಲವರು ಪಟ್ಟು ಹಿಡಿದರೆ, ಅವರ ಬೇಡಿಕೆಗೆ ಅನುಗುಣವಾಗಿ ಬದಲಾಯಿಸಿರುವುದು ಸರಿ ಎಂದು ಕೆಲವರು ವಾದಿಸಿದರು. ಜಗಳ ಸ್ವಲ್ಪ ಜೋರಾದಾಗ ನಾನು ಹೋಗಿ ಸಮಾಧಾನ ಮಾಡಿದೆ. ಆ ಸಮಯಕ್ಕೆ ನಾವು ಏನು ನಿರ್ಧಾರ ಮಾಡಿದೆವೋ ಅದೇ ಸರಿ ಎಂದೇ ಎಲ್ಲರೂ ಒಪ್ಪಿದರು. ಹೊರಗೆ ಜಗಳ ಕಡಿಮೆ ಆದರೂ ನನ್ನ ಒಳಗೆ ಜಗಳ ಪ್ರಾರಂಭವಾಯಿತು. ಯಾವುದು ಸರಿ? ಉದ್ದೇಶಕ್ಕೆ ಬದ್ಧವಾಗಿರುವುದು ಸರಿಯೇ? ಅಲ್ಲ, ಉದ್ದೇಶ ತುಂಬ ನಿರ್ದಿಷ್ಟ ಮಾಡದೆ ಇವೋಲ್ವ್ ಮಾಡುತ್ತ ಹೋಗುವುದು ಸರಿಯೆ? ನಮ್ಮ ಉದ್ದೇಶಕ್ಕೆ ಅಂಟಿಕೊಳ್ಳುವುದು ಸರಿಯೆ ಅಥವಾ ಅವರ ಬೇಡಿಕೆಗೆ ಅನುಗುಣವಾಗಿ ತರಬೇತಿಯನ್ನು ಬದಲಾಯಿಸುವುದು ಸರಿಯೇ? ಎರಡೂ ಸರಿ ಎಂದೊಮ್ಮೆ ಅನ್ನಿಸಿದರೆ, ಎರಡೂ ತಪ್ಪು ಎಂದು ಇನ್ನೊಮ್ಮೆ ಅನ್ನಿಸುತ್ತದೆ. ಮಕ್ಕಳೊಂದಿಗೆ ಶಿಬಿರದ ಉದ್ದೇಶವನ್ನು ಇವೋಲ್ವ್ ಮಾಡುವುದು ಮತ್ತು ಆ ಬೆಳೆಸಿರುವ ಉದ್ದೇಶ ಈಡೇರುವ ಹಾಗೆ ಎಲ್ಲರೂ ಏಕಚಿತ್ತದಿಂದ ಶ್ರಮಿಸುವುದು ಸರಿ ಅನ್ನಿಸುತ್ತದೆ. ತರಬೇತಿ ಮಾಡುತ್ತ ಉದ್ದೇಶವನ್ನು ಬೆಳೆಸುತ್ತ ತರಬೇತಿ ನಿಭಾಯಿಸಲು ಸಾಧ್ಯವೇ? ಯಾವುದಕ್ಕೂ ಉದ್ದೇಶ ಸ್ಪಷ್ಟ ಇರಬೇಕು. ಹೆಚ್ಚು ಸ್ಪಷ್ಟ ಆಗಲು ಅವಕಾಶವೂ ಇರಬೇಕು. ಇದಕ್ಕಿಂತ ಹೆಚ್ಚು ಯೋಚನೆಮಾಡಲು ಆಗಲಿಲ್ಲ.

**ದಿನ – 9. ರಾತ್ರಿ 8.30**

ಇವತ್ತು ಸನ್ನಿ ಬಂದಿದ್ರು. ಸನ್ನಿ ತೆರಪ್ಪನ್ ನಮಗೆಲ್ಲ ಗುರುಗಳು. ಅವರ ಪರಿಚಯ ಆಗಿದ್ದು ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ. ಅವರೇ ನಮಗೆ ಈ ಶಿಬಿರಗಳ ರುಚಿ ಹಿಡಿಸಿದವರು. ಒಳ್ಳೆಯ ಶಿಬಿರ ನಡೆಸಲು ಹೇಳಿಕೊಟ್ಟವರು. ಅವರು ಬಂದಾಗ ತರಬೇತಿಯಲ್ಲಿ ಒಂದು ಸೆಷನ್ ಮಾಡಲು ಕೇಳಿಕೊಂಡೆವು. ಮಾಡುವುದಿಲ್ಲ ಎಂದು ಖಡಾಖಂಡಿತ ಹೇಳಿದರು. ಅವರು ಶಿಬಿರ ವೀಕ್ಷಿಸುತ್ತ ಇಡೀ ದಿನ ಸುಮ್ನೆ ಕೂತಿದ್ರು. ಏನೂ ಮಾತಾಡಲಿಲ್ಲ. ನಮ್ಮ ಸಂಗಾತಿಗಳು ಕೆಲವರು ತರಬೇತಿ ಮಾಡುವಾಗ ಮಧ್ಯೆಮಧ್ಯೆ ಹೇಗೆ ಆಯಿತು ಎಂದು ಅವರತ್ತ ನೋಡಿದರು. ಅವರು ಪ್ರತಿಕ್ರಿಯಿಸಲಿಲ್ಲ. ಸಂಜೆ ತರಬೇತುದಾರರ ತಂಡದಲ್ಲಿ ಕೂತು ಈಗ ಮಾತಾಡೋಣ ಎಂದರು. ಎಲ್ಲರೂ ಎಲ್ಲವನ್ನು ಮಾತಾಡೋಣ ಎಂದು ಹೇಳಿದರು. ಒಳ್ಳೆಯದ್ದು, ಕೆಟ್ಟದ್ದು, ನಾಳೆಯ ಯೋಜನೆಗೆ ತಯಾರಿ, ಯಾಕೆ ಹೀಗೆ, ಎಲ್ಲವನ್ನೂ ಮಾತಾಡಿಸಿದರು. ತರಬೇತಿ ಆದ ಮೇಲೆ ಅದೇ ದಿನ ಸಂಜೆ ಕೂತು ನಡೆದ ತರಬೇತಿಯನ್ನ ಚಿಕಿತ್ಸಕ ದೃಷ್ಟಿಯಲ್ಲಿ ನೋಡುವುದನ್ನು ಸನ್ನಿಯವರು ತುಂಬಾ ಗಂಭೀರವಾಗಿ ಮಾಡುತ್ತಾರೆ. ಅದನ್ನು ಅಷ್ಟೇ ಗಂಭೀರವಾಗಿ ದಾಖಲಿಸುತ್ತಾರೆ. ಈ ಸೆಷನ್ ನ್ನು ಅವರು ಕ್ಲಿನಿಕ್ ಎಂದು ಕರೆಯುತ್ತಾರೆ. ನಮ್ಮ ಬೆಳವಣಿಗೆಗೆ ಇದು ತುಂಬಾ ಮುಖ್ಯ. ತರಬೇತುದಾರರಾಗಿ ಬೆಳೆಯುವುದಕ್ಕೆ ಬೇರೆಯವರ ವಿಮರ್ಶೆ ಸಹಾಯಮಾಡುತ್ತದೆ. ನೀವು ಗಮನಿಸಿದ ಅವರ ತಪ್ಪುಗಳನ್ನು ಅವರಿಗೆ ಹೇಳದಿದ್ದರೆ ಅವರು ತಮ್ಮ ತಪ್ಪನ್ನ ಕಂಡುಕೊಳ್ಳುವುದಾದರೂ ಹೇಗೆ? ಹೇಳದೆ ಹೋದರೆ ಅವರ ಬೆಳವಣಿಗೆಯನ್ನು ತಡೆದ ಹಾಗೆ ಅಲ್ಲವೆ? ಹೀಗೆಲ್ಲ ಮಾತುಕತೆ ಸನ್ನಿಯವರ ಸನ್ನಿಧಿಯಲ್ಲಿ ನಡೆಯಿತು. ರಮೇಶ್ ತರಬೇತಿ ನಡೆಯುತ್ತಿದ್ದಾಗ ಹೊರಗೆ ಹೋದ ಬಗ್ಗೆ ಸನ್ನಿಯವರು ವಿಚಾರಿಸಿದರು. ರಮೇಶ್, ಸುಮ್ಮನೆ ಬೋರಾಯ್ತು. ನನ್ನ ಸೆಷನ್ ಮುಗಿದಿತ್ತು ಎಂದರು. ಸನ್ನಿ ಮುಗುಳು ನಗುತ್ತಾ ತರಬೇತಿಗೆ ಸಿದ್ಧ ಪಠ್ಯ ಪುಸ್ತಕ ಇಲ್ಲ. ನಮ್ಮ ಅನುಭವ ಹಾಗೂ ಬೇರೆಯವರು ನಡೆಸುವ ತರಬೇತಿಯ ವೀಕ್ಷಣೆ ನಮಗೆ ಪಠ್ಯವಾಗುತ್ತದೆ. ಅದರಿಂದ ಕಲೀಲಿಕ್ಕೆ ತುಂಬಾ ಇರುತ್ತದೆ ಎಂದರು. ಈ ಮಾತನ್ನು ಸನ್ನಿಯವರು ಹೇಳುವಾಗ ಅವರು ಬೇರೆಯವರ ತರಬೇತಿಯನ್ನು ಗೌರವದಿಂದ ವೀಕ್ಷಿಸುವುದನ್ನು ಅನೇಕ ಸಲ ನೋಡಿದ್ದು ನೆನಪಾಗುತ್ತಿತ್ತು. ತಂಡ ಅಂದರೆ ತಂಡ, ಅದು ಬಿಗಿಯಾಗಿ ಇರಬೇಕು, ಒಂದಾಗಿ ಕೆಲಸ ಮಾಡಬೇಕು, ನಡೆಯುವ ಪ್ರಕ್ರಿಯೆಯಿಂದ ಸದಸ್ಯರು ಹೊರ ನಡೆಯಬಾರದು, ಜೊತೆಗೆ ಇರಬೇಕು, ಅಲರ್ಟ್ ಆಗಿರಬೇಕು, ಸೆಷನ್ ಒಬ್ಬರೇ ತಗೊಂಡರೂ ಎಲ್ಲರೂ ಜೊತೆಗಿದ್ದು ಆ ಸೆಷನ್ ನ್ನು ಯಶಸ್ವಿ ಮಾಡಬೇಕು, ಪರಿಣಾಮಕಾರಿ ಮಾಡಬೇಕು. ತಂಡದ ಒಬ್ಬ ಸದಸ್ಯ ವಿಚಲಿತನಾದರೂ ಶಿಬಿರಾರ್ಥಿಗಳು ಗಮನಿಸುತ್ತಾರೆ. ತಂಡದಲ್ಲಿ ಸದಸ್ಯರು ಹೇಗೆ ವರ್ತಿಸುತ್ತಾರೆ ಎಂಬುದನ್ನು ಮಕ್ಕಳು ಗಮನಿಸುತ್ತಾರೆ. ಹಾಗಾಗಿ ಪರಸ್ಪರ ಸದಸ್ಯರನ್ನು ಗೌರವಿಸುವುದು ತುಂಬಾ ಮುಖ್ಯ. ಅದರಲ್ಲೂ ಮಹಿಳಾ ಸದಸ್ಯರನ್ನು ತುಂಬಾ ಗೌರವದಿಂದ ನಡೆಸಿಕೊಳ್ಳಬೇಕಾಗುತ್ತದೆ . . .

ಈವತ್ತು ಸನ್ನಿ ನನ್ನನ್ನು ತರಾಟೆಗೆ ತೆಗೆದುಕೊಂಡ್ರು. ಪ್ರತಿದಿನ ಹೀಗೆ ಕ್ಲಿನಿಕ್ಕಿಂಗ್ ಮಾಡಿದ್ಯಾ? ಕೆಲವು ದಿನ ಮಾಡಿದ್ದೇನೆ, ಎಲ್ಲಾ ದಿನ ಮಾಡಿಲ್ಲ. ದಾಖಲಿಸಿದ್ದಿಯಾ? ಇಲ್ಲ ಎಂದೆ. ಇಡೀ ತರಬೇತಿ ನಡೆದ ಮೇಲೆ ದಾಖಲಿಸುತ್ತೇನೆ ಎಂದೆ. ನನ್ನ ಇಂಥ ಮಾತುಗಳು ಅವರಿಗೆ ರುಚಿಸುವುದಿಲ್ಲ. ಸುಮ್ಮನೆ ವಿಷಯ ಬದಲಾಯಿಸಿದರು. ಇದು ನಿಮ್ಮ ಬೆಳವಣಿಗೆಗೆ ತುಂಬಾ ಮುಖ್ಯ. ಮುಂದಿನ ವರ್ಷ ತರಬೇತಿ ಮಾಡುವ ಮುಂಚೆ ಕೂತು ತಯಾರಿ ಮಾಡುವಾಗ ಈ ದಾಖಲೆ ಇದ್ದರೆ ಒಳ್ಳೆಯ ತರಬೇತಿ ರಚಿಸುವಲ್ಲಿ ಸಹಾಯವಾಗುತ್ತದೆ. ಈ ಸಲ ಆದ ಎಷ್ಟೋ ತಪ್ಪುಗಳಿಂದ ಕಲ್ತು ಮುಂದೆ ಹೋಗಬಹುದು ಎಂದೆಲ್ಲ ತಿಳಿಸಿದ್ರು. ಸನ್ನಿ ಮೇಷ್ಟ್ರು ಹೋದ ಮೇಲೆ ಇಡೀ ದಿವಸ ತರಬೇತಿಯಾದರೂ ನಡೆಸಬಹುದು, ಸುಸ್ತಾದ್ರು ಕ್ಲಿನಿಕ್ ಮಾಡಬಹುದು, ಬರೆಯುವುದು ಹೇಗೆ ಎಂಬ ಚಿಂತೆ ನನಗೆ ಹತ್ತಿತ್ತು. ಸನ್ನಿಯವರ ಜೊತೆ ತುಂಬಾ ಕೆಲಸ ಮಾಡಿದವನು ನಾನು. ಇಷ್ಟು ವರ್ಷ ಆದ್ರೂ ಸನ್ನಿಯವರು ಕ್ಲಿನಿಕ್ ಅಥವಾ ದಾಖಲೆಯನ್ನು ಹೇಗೆ ತಪ್ಪದೆ ಮಾಡುತ್ತಾರೆ, ಅದನ್ನವರು ಹೇಗೆ ರೂಢಿಸಿಕೊಂಡಿದ್ದಾರೆ ಎಂದೆಲ್ಲ ಯೋಚಿಸಿದೆ.



**ದಿನ – 3. ಬೆಳಿಗ್ಗೆ 6.00**

ನಿನ್ನೆ ಮಕ್ಕಳಿಗೆ ಊಟ ಸಾಕಾಗಿಲ್ಲ. ನನಗೆ ತುಂಬಾ ಬೇಸರವಾಯ್ತು. ಹೀಗಾಗಬಾರದಿತ್ತು. ಏನು ಮಾಡುವುದು ಎಂದು ಯೋಚಿಸುತ್ತಿದ್ದೆ. ಬಹುಶಃ ತರಬೇತಿಯ ಮುಖ್ಯಸ್ಥನಾಗಿ ನಾನೇ ಇದರ ಜವಾಬ್ದಾರಿ ತೆಗೆದುಕೊಳ್ಳಬೇಕಿತ್ತು. ಹೊರಗಿನಿಂದ ಜನ ಬಂದು ಊಟಕ್ಕೆ ನಿಲ್ಲುತ್ತಾರೆ ಎಂದಾಗ ಅಡಿಗೆಯವರಿಗೆ ತಿಳಿಸಬೇಕಿತ್ತು. ಊಟಕ್ಕೆ ಬಿಡುವ ಮುಂಚೆ ಒಮ್ಮೆ ಅಡಿಗೆ ಕೋಣೆಗೆ ಹೋಗಿ ನೋಡಿ, ಅಡಿಗೆಯವರನ್ನು ಮಾತಾಡಿಸುತ್ತಿದ್ರೆ ಸಮಸ್ಯೆ ಪರಿಹರಿಸಬಹುದಿತ್ತು. ಕೆಲವು ಸಲ, ಬಾಳೆ ಹಣ್ಣು, ಸಿಹಿ ತಿಂಡಿ ಎಲ್ಲರಿಗೂ ಸಿಗುತ್ತಿರಲಿಲ್ಲ. ಕೆಲವರು ಲೆಕ್ಕಕ್ಕಿಂತ ಹೆಚ್ಚು ತೆಗೆದುಕೊಳ್ಳುತ್ತಿದ್ದರು. ನಾವು ಈ ಯುವಕರ ತಂಡಕ್ಕೆ ತಿಳಿಸಬೇಕಾಗಿದೆ, ಒಬ್ಬರಿಗೆ ಒಂದು ಅಂದಾಗ ಅದಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು. ಯಾಕೆಂದರೆ ಹೆಚ್ಚು ತೆಕ್ಕೊಂಡರೆ ಬೇರೆಯವರಿಗೆ ಇಲ್ಲವಾಗುತ್ತದೆ. ಊಟ ತಿಂಡಿಯ ವಿಷಯದಲ್ಲಿ ಬೇರೆಯವರಿಗೆ ಇಟ್ಟು ನಾವು ತಿನ್ನುವುದನ್ನು, ಇದ್ದದ್ದನ್ನು ಹಂಚಿ ತಿನ್ನುವುದನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಇದು ಬರೆ ಶಿಸ್ತಿನ ವಿಷಯ ಮಾತ್ರ ಅಲ್ಲ. ಜೀವನ ಶೈಲಿಯ ವಿಷಯವೂ ಹೌದು. ಮೌಲ್ಯದ ವಿಷಯವೂ ಹೌದು. ಬಹುಶಃ ಎಲ್ಲಾ ಯುವಕರೂ ಚೆನ್ನಾಗಿ ಮಲಗುವ ಹಾಗೆ ಮಾಡಬೇಕಿತ್ತು. ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯದ ವ್ಯವಸ್ಥೆ ಮಾಡುತ್ತಿದ್ರೆ ನಮ್ಮಲ್ಲಿ ಕೆಲವರು ಖಾಯಿಲೆ ಬೀಳುವುದು ತಪ್ಪಿಸಬಹುದಿತ್ತು. ಎಲ್ಲರ ಆರೋಗ್ಯಕ್ಕಾಗಿ ಇಂಥ ವಿಷಯಗಳತ್ತ ಗಮನಕೊಡುವುದು ಮುಖ್ಯ. ತಿಂದ ತಟ್ಟೆ ತಾನೇ ತೊಳೆಯುವುದು, ಪಾಳಿಯಲ್ಲಿ ಪ್ರತಿಯೊಬ್ಬರೂ ಕಸ ಹೊಡೆಯುವುದು, ನೆಲ ಒರೆಸುವುದು, ಶೌಚಾಲಯ ಸ್ವಚ್ಛ ಮಾಡುವುದು, ನೀರಿನ ಮಿತ ಬಳಕೆ, ಊಟ ತಿಂಡಿಯನ್ನು ಯಾರೂ ಬಿಸಾಡದಿರುವುದು, ಎಲ್ಲರೂ ಜೊತೆಗೆ ಕೂತು ತಿನ್ನುವುದು, ಬೇರೆಯವರಿಗೆ ಸಹಾಯಮಾಡುವುದು, ತನ್ನ ಎಲ್ಲ ಕೆಲಸವನ್ನೂ ತಾನೇ ಮಾಡುವುದು, ಸ್ವಾವಲಂಬಿಯಾಗಿ ಬದುಕಲು ಕಲಿಯುವುದು, ಇವು ಎಲ್ಲಾ ತುಂಬ ಚಿಕ್ಕ ವಿಷಯ ಅನ್ನಿಸಿದರೂ, ತರಬೇತಿ ನಡೆಸುವ ನಾವು ತುಂಬಾ ಗಮನಕೊಡಬೇಕಿತ್ತು. ಶಿಬಿರದಲ್ಲಿ ಬೇರೆಬೇರೆ ವಿಷಯಗಳ ಕಲಿಕೆಯಷ್ಟೇ ಮುಖ್ಯ ಜೀವನ ಶೈಲಿಯನ್ನುಹಾಗೂ ಮೌಲ್ಯವನ್ನು ರೂಢಿಸಿಕೊಳ್ಳುವುದು.

**ದಿನ 7. ರಾತ್ರಿ 10.30**

ಇವತ್ತು ಯುವಕರಲ್ಲಿ ತುಂಬಾ ದೊಡ್ಡ ಜಗಳವಾಯ್ತು. ಆಟ ಆಡುವಾಗ ಒಂದು ಜಗಳವಾದರೆ, ಚರ್ಚಾ ಸ್ಪರ್ಧೆಯಲ್ಲಿ ಮತ್ತೊಂದು ಜಗಳ. ಯುವಕರು ಸ್ವಲ್ಪ ಜಗಳಮಾಡಿದಾಗ ಇಷ್ಟಪಡುವ ನಾನು ಇವತ್ತು ಜಗಳ ದ್ವೇಷದ ಕಡೆಗೆ ತಿರುಗುವುದು ನೋಡಿ ಹತಾಶನಾಗಿ ಕೂತುಬಿಟ್ಟೆ. ಯುವಕರು ಜಗಳಮಾಡಬಾರದು ಎಂದಲ್ಲ. ಅದು ದ್ವೇಷದಲ್ಲಿ ಕೊನೆಗೊಳ್ಳಬಾರದಲ್ಲ. ಜಗಳ ಆದ ಮೇಲೆ ಎಲ್ಲವೂ ಸರಿಯಾಗಬೇಕು. ಸಂಬಂಧಗಳು ಎಲ್ಲವೂ ಒಳ್ಳೆಯದಾಗಬೇಕು ಎಂದು ನಂಬಿದವನು ನಾನು. ಇದು ಹೇಗೆ ಸಾಧ್ಯವಾಗಬೇಕು. ಚರ್ಚೆ ಮಾಡುವಾಗ ಜನ ಬೇರೆಯವರನ್ನು ಸೋಲಿಸುವುದಕ್ಕೆ ಚರ್ಚೆಮಾಡುತ್ತಾರೆ. ಆದುದರಿಂದ ಖಂಡಿಸುತ್ತಾರೆ. ವಿಚಾರಗಳನ್ನು ಧ್ವಂಸಗೊಳಿಸುತ್ತಾರೆ. ಕೆಟ್ಟದಾಗಿ ಮಾತಾಡಿ ವೈಯುಕ್ತಿಕವಾಗಿ ಕೆದಕುತ್ತಾರೆ. ಕಡೆಗೆ ಪ್ರತಿಸ್ಪಧಿಯನ್ನು ಮಾತಾಡಲೇ ಬಿಡುವುದಿಲ್ಲ. ಬಹುಶಃ ಮೊದಲಿಗೆ ನಾವು ಯುವಕರಿಗೆ ಯಾವುದೇ ಚರ್ಚೆ ಗೆಲ್ಲಲು, ಪ್ರತಿಸ್ಪರ್ಧಿ ಯಾರೇ ಇದ್ದರೂ ಅವರು ಮಾತಾಡುವುದನ್ನು ಗಮನವಿಟ್ಟು ಕೇಳಬೇಕು, ಅರ್ಥಮಾಡಿಕೊಳ್ಳಲು ಕೇಳಬೇಕು, ಗೌರವದಿಂದ ಕೇಳಬೇಕು. ಹೀಗೆ ಕೇಳಿದಾಗ ಅವರು ನಿಲ್ಲಿಸಿದ ಮೇಲೆ ತಮ್ಮ ತರ್ಕವನ್ನು ಪರಿಣಾಮಕಾರಿಯಾಗಿ ವಾದಿಸಿ ಸುಲಭದಲ್ಲಿ ಗೆಲ್ಲಬಹುದು ಎಂದು ತಿಳಿಸಬೇಕು. ಇಲ್ಲಿ ಎಲ್ಲಕ್ಕಿಂತಲೂ ಮುಖ್ಯ ಇರುವುದು ತನ್ನ ಎದುರಿಗೆ ಇರುವವರನ್ನು ಅರ್ಥಮಾಡಿಕೊಳ್ಳುವುದು. ಇದರಿಂದ ವಾತಾವರಣ ತಿಳಿಯಾಗುತ್ತದೆ. ಪರಸ್ಪರ ಗೌರವ ಬೆಳೆಯುತ್ತದೆ. ಜಗಳ ತಪ್ಪುತ್ತದೆ.


ಇನ್ನು ಆಟದಲ್ಲಿ ಆಡುವುದು ಮುಖ್ಯ, ಗೆಲ್ಲುವುದು ಅಲ್ಲ ಎಂದು ತಿಳಿಸುವುದು ಹೇಗೆ? ಸೋಲುವುದನ್ನು ಗೆಲ್ಲುವುದನ್ನು ಆಟದಲ್ಲಿ ಹೆಚ್ಚು ಏರುಪೇರಿಲ್ಲದೆ ತೆಗೆದುಕೊಳ್ಳಬೇಕು ಎಂದು ಮನದಟ್ಟುಮಾಡುವುದು ಹೇಗೆ? ಆಟ ಆಡುವ ಮಜ ತೆಗೆದುಕೊಳ್ಳುವುದೇ ಸರ್ವಶ್ರೇಷ್ಠ, ಅದರಷ್ಟು ದೊಡ್ಡ ಸುಖ ಇನ್ನೊಂದಿಲ್ಲ ಎಂದು ತಿಳಿಸುವುದು ಹೇಗೆ? ಬರೀ ಆಟಕ್ಕಾಗಿ ಆಟವನ್ನು ಆಡಿ ಎಂಬ ಸರಳ ವಿಷಯವನ್ನು ಯುವಕರಿಗೆ ಹೇಳವುದು ಅಷ್ಟು ಸರಳವಲ್ಲ ಎಂದು ಇವತ್ತು ಗೊತ್ತಾಯ್ತು. ಕಷ್ಟದ ಕೆಲಸ ಇದು. ನಾಳೆ ಇದನ್ನು ಇನ್ನೊಂದು ರಿತಿಯಲ್ಲಿ ಪ್ರಯತ್ನಿಸಬೇಕು.

- **Ravindra Jain**

## Who am I?

In those days I was feeling like as I'm very artificial (though I was not), I could not make an acumen freely on socio-cultural- economic issues. I being in the society, people want to overawe my thoughts though it is highly true to few likeminded species. If talk in favor of rights of LGPT (after all being with transgender in a meet and understanding their lives of difficulties), they say 'I think you are a guy'. If I support the idea of reservation policy, they say that I'm an anti-Brahmin.

True to this sensitivity, I have been to my native last week for my cousin's marriage. By the way of talking on current politics, I praised the present central government for giving non-corrupt governance on prima facie, in a moment, they deemed me as an anti-Congressman. Day after a marriage , we family decided to trek to Koodlu falls, on the way, in the midst of the conservation, the matter of celebration of Tippu Jayanthi (though I objected the timing and urgency of the govt. to announce the celebration ) in Karnataka, was crept in, obviously being read on valor of Tippu and his brave struggle against British, I tried my best to convey them that the anti-Hindu interpretation was made by then British Raj to undermine his glory and there is enough evidence in Srirangapattana to prove that he was not an anti-Hindu during in his prime time administration. But, they were petering my interpretation and called me as an anti-Hindu. Sometimes, my own family members says that I'm an anti-Jain as I condemn some worthless rituals of my religion.



After reading and reviewing an article of a national daily recently, I shared the excerpt of it to my friend (excerpt; present govt. is giving many corporate tax incentives which could have been generated and shifted toward social sector to rejuvenate the life of weaker section like women, old age and children, was the summary), soon I have been dubbed as a Leftist.

Couple of years ago, I have been to theatre to watch the movie 'PK' in which Aamir Khan was in leading role, I shared my rating on the film as an 'excellent and should watch movie' (movie was revolving around superstitious dogma of the religions and specially on so called 'godmen') to cousin, and the immediate response was again you are an anti-Hindu.

Though I have been fascinated by Karl Marx, his ideology and his interpretation of Society, and I do support to the cause of labor right, I still think that India must bring FDI in letter and spirit to


create employment opportunities in all the sectors, and I feel all the parties must juxtapose to allow to create business-friendly environment by passing the GST bill for national interest. And I lauded the strategy of foreign visit of our PM which brings thousands-lakh crores to India. By listening this interpretation, many of my friends reinserted themselves by calling me as a pro-BJP and Rightist.

When I was in Social Work degree, Prof. Kurian, my faculty, used to tell us that 'don't succumbed to any ideology, study it by wearing an Objective Spectacles to the your eyes' and then confirm you stand in your coffer'. Very true and trying to follow the sentence (skeptic behavior sneaking through here and there though). I'm not an anti-Hindu, nor do a leftist and I don't fall into any 'ist' category, and after joining the Foundation, trying to immerse in Social Science subject, all I can say that I'm trying to become a person who is a sovereignty in one's life, socialistic ideals in deeds, secular by heart, democratic in thoughts and republican by a citizenship, which is being envisaged in our Preamble.

**– ರಮೇಶ ಕುಮಾರ.ಡಿ ಬಡಿಗೇರ**

**ಶಿಕ್ಷಕರ ವೃತ್ತಿ ಬದುಕಿನ ಜೀವಾಳ**

*ಸಂದಿಗ್ಧ ಸಂದರ್ಭಕ್ಕೆ ನೀ ಸ್ನೇಹಿಯಾದೆ*
*ಶಿಕ್ಷಕರ ಕಲಿಕೆಯ ತಾಣವು ನೀನಾದೆ*
*ಶಿಕ್ಷಕರನ್ನು ತಯಾರಿಸುವ ಹೊಣೆ ಹೊತ್ತ ನನಗೆ*
*ತಯಾರಾಗಿರುವ ಶಿಕ್ಷಕರ ಜೊತೆ ಕಾಯಕವು ಎನಗೆ*
*ನೀನೊಂದು ಜ್ಞಾನದ ದೇಗುಲ*
*ನಾನು ನಿನ್ನ ಪ್ರೀತಿಯ ಮೂಲ ಭಕ್ತ*
*ವಿಭಿನ್ನ ಭಕ್ತರನ್ನು ನೀ ಸೆಳೆದುಕೋ ನಿನ್ನ ಸ್ನೇಹದ ಹಸ್ತದಿ*
*ಕಲೆಗೆ ಎಲ್ಲಿಯೂ ಬೆಲೆ ಎಲ್ಲಿಯೂ ನೆಲೆ*
*ಕಲೆಯ ಬೆಲೆಯೊಳಗೆ ರಾಷ್ಟ್ರ ನಿರ್ಮಾಣ ಮಾಡುವ ಶಿಕ್ಷಕ*
*ಅದಕ್ಕಾಗಿ ನೀನಾಗು ಶಿಕ್ಷಕರ ಪ್ರತಿಭಾ ಪೋಷಕ*
*ಸಮೃದ್ಧ ಸಮಾಜದ ಸಂಸ್ಥಾಪಕನೇ ಶಿಕ್ಷಕ*
*ಅವನ ಸಮೃದ್ಧಿಯ ಸಾಧನೆ ಇಹುದು ನಿನ್ನ ಮೂಲಕ*
*ಜ್ಞಾನದ ಗಣಿಯಾಗು ಶಿಕ್ಷಕರ ಋಣಿಯಾಗು*
*ಸಮಾಜದ ಸಮ್ಮುಖಿಯಾಗು – ಕಲ್ಪನೆಯ ಕನ್ನಡಿಯಾಗು*
*ಶಿಕ್ಷಕರ ವೃತ್ತಿ ಬದುಕಿನ ಜೀವಾಳ ನೀನಾಗು.*



**– ರಾಮಕೃಷ್ಣ**

## ಒಂದು ಜನಪದ ಕಥೆ

ಒಬ್ಬ ರೈತ ಇದ್ದ. ಅವನಿಗೊಬ್ಳು ಹೆಂಡ್ತಿ ಇದ್ಳು. ಇಬ್ರೂ ದುಡ್ಕೊಂಡ್, ಉಂಡ್ಕೊಂಡ್, ಉಟ್ಕೊಂಡ್ ಚೆನ್ನಾಗಿದ್ರು. ಮಕ್ಳು ಮರಿ ಎಲ್ಲಾ ಆಗಿ ಅವ್ರು ಬೆಳಿಯೋದನ್ನೂ ನೋಡ್ತಾ ಆನಂದವಾಗಿದ್ರು.

ರೈತ ಮಣ್ಣಿನ್ ಮಗ್ನೆ ಆಗಿದ್ದ. ಮಣ್ಣನ್ನು ಚಿನ್ನ ಎಂಬಂತೆ ನೋಡ್ಕೊಳ್ತಿದ್ದ. ಹೊಲಾನ ಗೊಬ್ರ ಚೆಲ್ಲಿ, ಉತ್ತಿ–ಬಿತ್ತಿ, ತಾನು ಉಣ್ಣೋದ್ ತಿನ್ನೋದನ್ನೆಲ್ಲ ಬೆಳ್ಕೊಳ್ತಿದ್ದ. ಹೆಸ್ರು, ಉದ್ದು, ರಾಗಿ, ಜೋಳ, ಸೊಪ್ಪು ತರ್ಕಾರಿ, ಏನುಂಟು ಏನಿಲ್ಲ ಎಂಬಂತೆ ಬೇಕ್ ಬೇಕಾದ್ದೆಲ್ಲ ಬೆಳ್ಕೊಳ್ತಿದ್ದ.

ಹೆಂಡ್ತಿ ಮನೇಲೂ, ಹೊಲ್ದಲ್ಲು ಜೊತೆಯಾಗಿರ್ತಿದ್ಲು. ಊಟ ರೆಡಿ ಮಾಡ್ತಿದ್ಲು. ರೈತ ದುಡಿವಲ್ಲಿಗೆ ಹೊತ್ಕೊಯ್ದು ತಾನೂ ಕೂಡಿ ಊಟ ಮಾಡ್ತಿದ್ಲು, ಹೊಲ್ದಲ್ಲಿ ಮಾಡೋ ಕೆಲಸ ಮುಗೀತು ಅಂತಿಲ್ಲ ಎಂಬಂತೆ ಒಂದರ ಹಿಂದೆ ಒಂದು ಕೆಲಸಕ್ಕೆ ಕೈ ಹಚ್ಚಿ ದುಡಿಯೋದ್ರಲ್ಲಿ ಜತೆಯಾಗಿರ್ತಿದ್ಲು.

ಅವ್ಳು ಬೀಜ ಕಡ ಬಿಡ್ವಾಗ ರೈತನ ಹಿಂದಿರ್ತಿದ್ಲು, ಕಳೆ ಕೀಳ್ವಾಗ ರೈತನ ಮುಂದಿರ್ತಿದ್ಲು, ಒಬ್ಳೇ ಆದಾಗ ತೆವ್ರಿತೆವ್ರೀನೆಲ್ಲ ಸ್ವಚ್ಚಮಾಡ್ತಾ ದನಗ್ಳೀಗೆ ಮೇವು ಹುಲುಸ್ಲೀ ಅಂತಿದ್ಳು.



ರೈತ ಆ ಕಡೆ ಈ ಕಡೆ ಸುತ್ತಾಡಿ ತೊಪ್ಲು ಸೆಗಣಿ ಏನೆ ಸಿಕ್ಕಿದ್ರು ಭೂಮಿ ಹುಲುಸ್ಲಿ ಅಂತ ಎತ್ತಾಕೊಳ್ತಿದ್ದ.

ಒಂದಿನ ಇಬ್ರಿಗೂ ಭಾರಿ ಬೇಜಾರಾಯ್ತು. ವಯಸ್ಸಾದಂತೆ ಮಕ್ಳೆಲ್ಲಾ ಓದಿ ಸಿಟಿ ಸೇರಿದ್ರು. ಹೊಲದ ಕೆಲ್ಸಕ್ಕೆ ಅವ್ರವ್ರೆ ಆಗಿ ಹೋಗಿದ್ರು. ‘ಯಾಕಾದ್ರು ದುಡ್ಮೆ, ಯಾರಿಗಂತ ದುಡ್ಮೆ’ ಅಂತ ಆಡಾಡ್ತ ಒಂದಿನ ಭಾರಿ ಕುಗ್ಗೋಗಿ ಬಿಟ್ರು.

ಆಗ ರಾತ್ರೆ ಭಾಳಾ ಹೊತ್ತಾದ್ಮೇಲೆ ನಿದ್ರೆ ಹತ್ತಿ ಗಂಡನಿಗೊಂದು ಕನಸು ಬಿತ್ತು. ಆ ಕನಸಲ್ಲಿ ಸೂರ್ಯ ಹೊಟ್ಕೊಂಡ್ ಹುಟ್ಕೊಂಡ್ ಬರ್ತಾ ಬರ್ತಾ, ಅಷ್ಟಕ್ಕೆ ಅವನಿಗೊಂದು ರಥವಾಗಿ, ಏಳೇಳ್ ಕುದ್ರೆಗ್ಳು ಅವನ್ನ ಎಳ್ದಂಗು, ಅವನು ವಿರಾಜಮಾನ ಆದಂಗು ನೋಡ್ತಾ ನೋಡ್ತಾ ಭಾರಿ ಆನಂದ ಆದಂಗು ಆಯ್ತು. ಆಮೇಲೆ ಎಚ್ಚರಾಯ್ತು.

ಎಚ್ಚರಾದವ್ನು ತನ್ನ ಕನಸನ್ನು ಹೆಂಡ್ತಿಗೆ ಹೇಳ್ದ. ಅವ್ಳಿಗೂ ಎಷ್ಟೊಂದು ಖುಷಿಯಾಯ್ತು ಅಂದ್ರೆ ‘ಹ್ದೋ’ ಅಂದ್ಳು. ‘ಎಷ್ಟು ಚೆನ್ನಾಗಿದೆ’ ಅಂದ್ಳು. ಇಂತ ಕನಸು ಬೀಳೋದಂದ್ರೆ ನಾವು ಸೋಲ್ಬಾರ್ದು ಅಂತ. ಸೂರ್ಯ ಸೋತ್ರೆ ಪ್ರಪಂಚ ಮುಗ್ದಂಗೆ. ಅವನಿರೋಗಂಟ ನಾವೂ ಇರೋವ’ ಅಂದ್ಳು. ‘ನಡೀರಿ’ ಅಂತ ಗಂಡನ್ನ ಹೊರಡಿಸ್ಕೊಂಡು ಹೊಲಕ್ಕೋದ್ಳು. ಅಲ್ಲಿ ಉತ್ತ ಹೊಲದ್ಮೇಲೆ ಎಳೆ ಬಿಸಿಲು ಚೆಲ್ಲಿಕೊಂಡಿತ್ತು. ಇಬ್ರೂ ‘ಕೈಲಾದ್ದು ದುಡಿಯೋದ್ರಲ್ಲಿ ಸೋಲಾಕೇನಿದೆ’ ಅಂದ್ಕೊಂಡ್ರು.

ಮತ್ತೆ ಅವ್ರು ಮಣ್ಣನ್ನೂ ಬದುಕನ್ನೂ ಚಿನ್ನ ಮಾಡ್ಕೊಂಡ್ ಸೂರ್ಯನ ಬಿಸಿಲಿನ್ ಹಾಗೆ ಬೆಚ್ಚಗೆ ಸುಖವಾಗಿದ್ರು.

– **ಅನಿಲ ಕೂಡಂಬಲ**

**ತಾರತಮ್ಯ - ಸ್ವಾಭಾವಿಕ ಅಥವಾ ನಿರ್ಮಿತ!**

ಕೊನೆ ತಿಂಗಳಿನ 29 ಮತ್ತು 30ನೇ ತಾರೀಕಿನಂದು ನಡೆದ ಲಿಂಗ ಸೂಕ್ಷ್ಮತೆ/ತಾರತಮ್ಯ ಕುರಿತಾದ 2 ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿದೆ. ಈ ಕಾರ್ಯಾಗಾರದಲ್ಲಿ ತಾರತಮ್ಯಕ್ಕೆ ಸಂಬಂಧಿಸಿದಂತ ಹಲವಾರು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಲಿಂಗ ತಾರತಮ್ಯ, ಜಾತಿ ತಾರತಮ್ಯ, ಸಾಮಾಜಿಕ ತಾರತಮ್ಯ, ಆರ್ಥಿಕ ತಾರತಮ್ಯ ಶಿಕ್ಷಣದಲ್ಲಿ ತಾರತಮ್ಯ ಇತ್ಯಾದಿ. ನಮ್ಮ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಈ ತಾರತಮ್ಯಕ್ಕೆ ಸೂಕ್ತವಾದ ಉದಾಹರಣೆಗಳಾಗಿ ನಮ್ಮ ಮುಂದೆ ಹರಿದಾಡಿದವು. ನಮಗೆ ತಿಳಿದು ಮಾಡಿರುವುದು ಕೆಲವಾದರೆ ನಮಗೆ ತಿಳಿಯದೆ ಆದದ್ದು ಹಲವಾರು. ಅವುಗಳನ್ನು ಮೆಲುಕು ಹಾಕುತ್ತಾ ಹೋದಾಗ ಹತ್ತು ಹಲವು ಪ್ರಶ್ನೆಗಳು ಮೂಡತೊಡಗಿದವು. ನಿಜವಾಗಿಯೂ ಏನಿದು ತಾರತಮ್ಯ? ಇದು ಕೇವಲ ಸಮಾನತೆಗೆ ಇರುವ ವಿರುದ್ಧಾರ್ಥಕ ಪದವೆ? ಅದು ಎಲ್ಲಿಂದ ಬರೋದು? ಯಾರು ಅದರ ಕರ್ತೃ ? ತಾರತಮ್ಯ ಇರಬೇಕಾ? ಬೇಡವಾ? ಇದ್ದರೆ ಎಷ್ಟರ ಮಟ್ಟಿಗೆ ಇರಬೇಕು ಇತ್ಯಾದಿ. ಈ ಪ್ರಶ್ನೆಗಳ ಬೆನ್ನತ್ತಿ ಹೊರಟಾಗ ಅತಿ ಮುಖ್ಯವಾಗಿ ಕಂಡುಬಂದದ್ದು ಏನೆಂದರೆ ಈ ವಿಷಯವನ್ನು ಎರಡು ಆಯಾಮಗಳಲ್ಲಿ ನೋಡಬೇಕು ಎಂಬುದು... **ನಾನು ಮಾಡಿರುವ ತಾರತಮ್ಯ ಒಂದಾದರೆ ನನಗೆ ಆಗಿರುವ ತಾರತಮ್ಯ(ನಾನು ಭಾವಿಸಿರುವಂತೆ) ಮತ್ತೊಂದೆಡೆ**....

ಈ ಮೇಲಿನ ಆಯಾಮಗಳಲ್ಲಿ ನೋಡಿದರೆ ಸಮಾಜದಲ್ಲಿ ಪ್ರತಿಯೊಬ್ಬರು ಒಂದಲ್ಲಾ ಒಂದು ರೀತಿಯಲ್ಲಿ ತಾರತಮ್ಯಕ್ಕೆ ಒಳಗಾದವರೇ? ಅದು ಸ್ವನಿರ್ಮಿತವಾಗಿರಬಹುದು. ಅಥವಾ ಸ್ವಾಭಾವಿಕವಾಗಿ ತಾರತಮ್ಯ ಪ್ರಕ್ರಿಯೆಯಲ್ಲಿ ಭಾಗಿಯಾಗಿರಬಹುದು......ಮೊನ್ನೆಯವರೆಗೆ ನಾನು, ನನಗೆ ತುಂಬಾ ತಾರತಮ್ಯವಾಗಿದೆ ಎನ್ನುವ ಮನೋಭಾವದಲ್ಲಿದ್ದೆ. ಆದರೆ ಮೊನ್ನೆಯ ಲಿಂಗ ತಾರತಮ್ಯ ಕುರಿತಾದ ಕಾರ್ಯಾಗಾರದ ನಂತರ ನನ್ನ ಜೀವನದಲ್ಲಿ ನಡೆದ ಎಷ್ಟೊ ಘಟನೆಗಳಲ್ಲಿ ತಾರತಮ್ಯದ ಅಂಶ ಒಳಗೊಂಡಿದೆ ಅನ್ನೋದು ಗೊತ್ತಾಯಿತು. ನನಗೆ ತಿಳಿಯದಂತೆ ಹಲವಾರು ಬಾರಿ ನನ್ನ ಸುತ್ತಮುತ್ತಲಿರುವವರನ್ನೇ ಆ ಭಾವದಿಂದ ನೋಡಿದ್ದೇನೆ.




ನನ್ನ ಜೀವನದಲ್ಲಿ ಇತ್ತೀಚೆಗೆ ನಡೆದ ಒಂದೆರಡು ಘಟನೆಗಳನ್ನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

1. ಸದ್ಯದಲ್ಲಿ ನನ್ನ ಮನೆಯಲ್ಲಿ ಕಟ್ಟಡ ಕಾರ್ಯ ನಡೆಯುತ್ತಿದೆ. ಮೇಸ್ತ್ರಿ ಬಾಬು ಅದರ ಉಸ್ತುವಾರಿ (ನಮ್ಮೂರಿನ ಒಬ್ಬ ವ್ಯಕ್ತಿ ಮತ್ತು ಒಳ್ಳೆಯ ಕುಶಲ ಕರ್ಮಿ). ಎಂದಿನಂತೆ ಒಂದು ದಿನ ಬೆಳಗ್ಗೆ ಆತ ಕೆಲಸಕ್ಕೆ ಬಂದ. ಆಗ ನಾನು ಬೆಳಗಿನ ಚಹಾ ಸವಿಯುತ್ತಿದ್ದೆ. ಆತನಿಗೂ ಚಹಾ ಕುಡಿಯಲು ಅಹ್ವಾನಿಸಿದೆ.. ಅಪ್ಪಾ - ಅಪ್ಪನ ಗೆಳೆಯ ಮತ್ತು ಬಾಬು ಕೆಲಸದ ಕುರಿತು ಸಂಭಾಷಣೆಯಲ್ಲಿ

ತೊಡಗಿದರು. ಅಷ್ಟರಲ್ಲಿ ಅಮ್ಮ ಅಡುಗೆ ಮನೆಯಿಂದ ತಟ್ಟೆಹಿಡಿದು ಹೊರಬಂದಳು. ತಟ್ಟೆಯಲ್ಲಿ ಎರಡು ಸ್ಟೀಲ್ ಕಪ್ (ನಾವು ದಿನ ಬಳಸುವ ಲೋಟ) ಇದ್ದರೆ ಒಂದು ಪೇಪರ್ ಕಪ್ ಇದ್ದವು. ಅದನ್ನು ಕಂಡ ನಾನು ದಿನ ಬಳಸುವ ಸ್ಟೀಲ್ ಕಪ್ ಇಲ್ಲದೆ ಇರಬಹುದು ಅಂತ ಭಾವಿಸಿದೆ. ಚಹಾದ ತಟ್ಟೆ ಹಿಡಿದು ನಾನು ಅವರೆಡೆಗೆ ಹೋದೆ, ಮೊದಲು ಅಪ್ಪನ ಗೆಳೆಯನಿಗೆ ಚಹಾ ಕೊಟ್ಟು ನಂತರ ಬಾಬುಗೆ ಚಹಾ ಕೊಡಲು ಹೋದೆ...ಆತ ಪೇಪರ್ ಕಪ್ ಎತ್ತಿಕೊಳ್ಳಲು ಬಂದ. ಆಗ ನಾನು ಪರವಾಗಿಲ್ಲ ನೀವು ಸ್ಟೀಲ್ ಕಪ್ ತಗೊಳ್ಳಿ. ಅಪ್ಪ ಪೇಪರ್ ಕಪ್ ತಗೋತಾರೆ ಅಂತ ಹೇಳುತ್ತಿರುವಾಗಲೆ.. ಅಪ್ಪ ಹೀಗೆ ಹೇಳಿದರು..."ಅವನು ನಾವು ಬಳಸುವ ಕಪ್ನಲ್ಲಿ ಚಹಾ ಕುಡಿಯನು..ಆತ ಕೆಳ ಸ್ತರದಿಂದ ಬಂದವನು....ನಾವು ಕೊಟ್ಟರೂ ಅವನು ಸ್ವೀಕರಿಸುವುದಿಲ್ಲ....". ಆದರೂ ಸಹ ನಾನು ಪರವಾಗಿಲ್ಲ. ನೀವು ಸ್ಟೀಲ್ ಕಪ್ ತಗೊಳ್ಳಿ ಅಂತ ಬಲವಂತ ಮಾಡಿದೆ..ಕೊನೆಗೆ ಅವನು ಪೇಪರ್ ಕಪ್ ಎತ್ತಿಕೊಂಡ....ಇಂತಹ ಹಲವಾರು ಘಟನೆಗಳು ನಮ್ಮ ಮನೆಯಲ್ಲಿ ನಡೆದಿವೆ ಮತ್ತು ದಿನ ನಡೆಯುತ್ತಿವೆ. ಅದರಲ್ಲಿ ನನ್ನ ಪಾತ್ರವೂ ಇದೆ.

2. ನಾನು ಎಂ.ಬಿ.ಎ. (M.B.A.) ಓದಲು ಹೈದರಾಬಾದಿನ ಓಸ್ಮಾನಿಯಾ ವಿಶ್ವವಿದ್ಯಾಲಯದ (Osmania University) ಐಪಿಇ (IPE – Institute of Public Enterprise) ಸಂಸ್ಥೆ ಸೇರಿದೆ. ನನ್ನ ಜೊತೆಗೆ ಇನ್ನು 16 ಜನ ಪ್ರವೇಶ ಪಡೆದರು. ಆ 16 ಜನ ಇಂಜಿನಿಯರಿಂಗ್ ಓದಿದವರು, ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಯಲ್ಲಿರುವವರು, ಒಳ್ಳೊಳ್ಳೆಯ ಕಾರಿನಲ್ಲಿ ಕಾಲೇಜಿಗೆ ಬರುವವರು. ತುಂಬಾ ಚೆನ್ನಾಗಿ ಇಂಗ್ಲಿಷ್ ಮಾತನಾಡುವವರು. ಅವರಲ್ಲಿ ನಾನೊಬ್ಬ. ದಿನವೂ ನಡೆದುಕೊಂಡು ಕಾಲೇಜಿಗೆ ಹೋಗುವವನು. ಆರ್. ಟಿ.ಸಿ. ಬಸ್‌ನಲ್ಲಿ ಪ್ರಯಾಣ ಮಾಡುವವನು. ತೀರ ಕೆಳ ಸ್ತರದಲ್ಲಿ ನೋಡುವ ಬಿ.ಎ. ಪದವಿ ಓದಿದವನು ಮತ್ತು ಎಲ್ಲದಕ್ಕೂ ಮಿಗಿಲಾಗಿ ಇಂಗ್ಲಿಷ್ ಮಾತನಾಡಲು ಬರದೆ ಇರುವವನು. ಒಂದೆಡೆಯಾದರೆ

ಕಾಲೇಜಿನ ಮೊದಲ ಕೆಲ ದಿನಗಳು ತುಂಬಾ ಚೆನ್ನಾಗಿತ್ತು, ಎಲ್ಲರೂ ತುಂಬಾ ಚೆನ್ನಾಗಿದ್ದೆವು. ಆದರೆ ಅದು ಬಹಳ ದಿನ ಉಳಿಯಲಿಲ್ಲ. ನಮ್ಮಲ್ಲಿಯೇ ಗುಂಪುಗಳಾದವು. ಅವುಗಳನ್ನು ಮಿನಿರತ್ನ ಮತ್ತು ನವರತ್ನಗಳಾಗಿ ಕರೆಯುತ್ತಿದ್ದರು (ಮಿನಿ ರತ್ನ ಮತ್ತು ನವರತ್ನ ಹೂಡಿಕೆ ಆಧಾರಿತ ದೊಡ್ಡಗಾತ್ರದ ಸರ್ಕಾರಿ ಸಂಸ್ಥೆಗಳ ಪ್ರಕಾರಗಳು). ನಾನು ನಿಧಾನವಾಗಿ ಆ ಗುಂಪುಗಳಿಂದ ಹೊರಗಿಡಲ್ಪಟ್ಟೆ. ಕಾರಣ ಹಲವಾರು. (ನನ್ನ ಮನಸ್ಸಿನಲ್ಲಿ ಮೂಡಿದವು). ಕ್ಲಾಸಿನಲ್ಲಿ ನನ್ನ ವಿಚಾರಗಳಿಗೆ ಬೆಲೆಯಿಲ್ಲದಂತಾಯಿತು, ಕ್ಲಾಸಿನ ಹೊರಗೆ ನನ್ನ ಭಾಗವಹಿಸುವಿಕೆ ಕಡೆಗಣಿಸಲಾಯಿತು. ಅದೆಷ್ಟೋ ಸಲ ನಾನು ಯೋಚಿಸಿದ್ದುಂಟು...."ನಾನು ದೊಡ್ಡ ಹುದ್ದೆಯಲ್ಲಿದ್ದರೆ ಅವರು ನನ್ನ ವಿಚಾರಗಳಿಗೆ ಬೆಲೆ ಕೊಡುತ್ತಿದ್ದರೇನೋ"? "ನಾನು ಇಂಜಿನಿಯರಿಂಗ್ ಓದಿದ್ದರೆ ಅವರಲ್ಲಿ ಒಬ್ಬನನ್ನಾಗಿ ಕಾಣುತ್ತಿದ್ದರೇನೊ"? "ನಾನು ಚೆನ್ನಾಗಿ ಇಂಗ್ಲಿಷ ಮಾತಾನಾಡಿದರೆ ನನ್ನ ಗೌರವಿಸುತ್ತಿದ್ದರೇನೊ"? ಇತ್ಯಾದಿ... ಇತ್ಯಾದಿ.....

ಈ ಮೇಲಿನ ಘಟನೆಗಳಲ್ಲಿ ತಾರತಮ್ಯ ಸ್ವಾಭಾವಿಕವೋ...! ನಿರ್ಮಿತವೊ...! ನೀವೇ ನಿರ್ಧರಿಸಿ....

– ಡಾ. ಅರವಿಂದ ರಾಠೋಡ.

**ಹೆಣ್ಣೇ ನಿನಗೇಕೆ ಹೀಗೆ ?**

ಸ್ತ್ರೀ ಸಮಾನತೆ ಕುರಿತು ಅನಾದಿಕಾಲದಿಂದಲೂ ಮಾತನಾಡುತ್ತಲೇ ಬಂದಿದ್ದೇವೆ. ಸಾವಿರಾರು ವರ್ಷಗಳು ಕಳೆದರೂ ಇಂದಿಗೂ ಸ್ತ್ರೀ ಸಮಾನತೆ ಕುರಿತು ಗಟ್ಟಿಯಾಗಿ ಹೇಳಲು ಆಗುತ್ತಿಲ್ಲ. ಇದಕ್ಕೆ ಕಾರಣವನ್ನು ನಿಖರವಾಗಿ ಹೇಳುವದು ಸುಲಭವಲ್ಲ. ಮಹಿಳೆಯರಿಗೆ ಸಮಾಜ ನೀಡಿರುವ ಸ್ವಾತಂತ್ರ್ಯವನ್ನು ಅವಲೋಕಿಸಿದಾಗ ಅವಳಿಗೆ ಸಿಗುವ ಸ್ವಾತಂತ್ರ್ಯವು ಕೇವಲ ಅಡುಗೆಮನೆ ಹಾಗೂ ಮನೆಗೆಲಸಕ್ಕೆ ಸೀಮಿತವಾಗಿದೆ. ಹೆಣ್ಣಿಗೆ ಹೆಣ್ಣಾಗಿ ರೂಪಿಸುವ ಮನೆಯಿಂದಲೇ ಶೋಷಣೆ ಪ್ರಾರಂಭ ವಾಗಿ ವ್ಯಾಪಕವಾಗಿ ಸಮಾಜವು ಅದನ್ನು ಪೋಷಿಸುತ್ತದೆ. ಬಾಲ್ಯದಲ್ಲಿ ಮಗು ಲಿಂಗಭೇದವಿಲ್ಲದೆ ಆಟವಾಡುತ್ತದೆ. ಅದು ಗಂಡುಮಗುವಿನಂತೆ ಸಹಜವಾಗಿರುತ್ತದೆ. ಅದನ್ನು ತಂದೆ–ತಾಯಿಗಳು ನೀನು ಹೆಣ್ಣು ಈ ಆಟಗಳನ್ನು ಆಡಬಾರದು. ಈ ಆಟಗಳು ಗಂಡುಮಕ್ಕಳು ಆಡುತ್ತಾರೆ. ನೀನು ಹೆಣ್ಣುಮಗು. ನಿನ್ನ ಆಟಗಳು ಬೇರೆ ಎಂಬ ಭಾವನೆಯನ್ನು ಬಾಲ್ಯದಲ್ಲಿಯೇ ಹೆಣ್ಣುಮಕ್ಕಳಿಗೆ ಮನವರಿಕೆಮಾಡಿ ಹಂತ ಹಂತವಾಗಿ ಅವಳಿಗೆ ನಾನು ಗಂಡಿಗಿಂತ ಭಿನ್ನ ನನಗೆ ಗಂಡಿಗಿರುವ ಸಾಮರ್ಥ್ಯ ಹಾಗೂ ಸ್ವಾತಂತ್ರ್ಯ ನನಗಿಲ್ಲ ಎಂಬೀ ಪರಿಕಲ್ಪನೆಯನ್ನು ರೂಪಿಸಲು ಮನೆ ಮತ್ತು ಸಮಾಜವು ಮಹಿಳೆಯರಿಗೆ ನಿಯಂತ್ರಿಸುತ್ತಲೆ ಬಂದಿದೆ.



ಮೇಲನೋಟಕ್ಕೆ ನೋಡಿದಾಗ ಹೆಣ್ಣು ಸ್ವಭಾವತಃ ಗಂಡಿಗಿಂತ ಭಿನ್ನ ಎಂದು ಕಂಡುಬರುತ್ತದೆ. ಆದರೆ ಆಳಕ್ಕಿಳಿದು ಆಲೋಚಿಸುತ್ತಾ ಹೋದಂತೆ ಸ್ವಭಾವ ಮತ್ತು ಗುಣಗಳು ಹೆಣ್ಣು–ಗಂಡಿನಿಂದ ಬಂದವಲ್ಲ, ಅವು ನಾವು ಬೆಳೆದಿರುವ ಪರಿಸರ ಮತ್ತು ನಮಗೆ ಸಿಕ್ಕಿರುವ ಅವಕಾಶಗಳಿಂದ ಹೆಚ್ಚಾಗಿ ನಮಲ್ಲಿ ಮೈಗೂಡಿವೆ. ಪ್ರತಿಯೊಬ್ಬರಲ್ಲಿ ಹೆಣ್ಣು–ಗಂಡಿನ ಗುಣಗಳು ಇದ್ದೇ ಇರುತ್ತವೆ. ಈ ಗುಣಗಳು ಇವರಿಗೆ ಎಂದು ಸೀಮಿತ ಮಾಡುವದು ಕಷ್ಟಕರ. ಗಂಡು–ಹೆಣ್ಣಿನ ವ್ಯತ್ಯಾಸವನ್ನು ಹುಡುಕುತ್ತಾಹೋದರೆ ಕೊನೆಗೆ ಸಿಗುವುದು ಒಂದು ದೈಹಿಕ ವ್ಯತ್ಯಾಸ ಮತ್ತು ಸಾಮಾಜಿಕವಾಗಿ ಬೆಳೆಸಿರುವ ವ್ಯತ್ಯಾಸ.

ಸಮಾಜವು ತಲತಲಾಂತರದಿಂದ ಹೆಣ್ಣುಮಕ್ಕಳನ್ನು ನಿಯಂತ್ರಿಸುತ್ತಲೇ ಬಂದಿದೆ. ಅದಕ್ಕಾಗಿಯೇ ಅನೇಕ ಗಾದೆಗಳನ್ನು ಸೃಷ್ಟಿಸಿದ್ದಾರೆ. ಅವು ಇಂದಿಗೂ ಹೆಣ್ಣನ್ನು ನಿಯಂತ್ರಿಸಲು ಸಹಾಯಕವಾಗುತ್ತಿವೆ. ಹೆಣ್ಣು ಮಣ್ಣಿನ ಪಾತ್ರೆ ಗಂಡು ತಾಮ್ರದ ಪಾತ್ರೆ, ಹೆಣ್ಣು ತಿರುಗಿ ಕೆಟ್ಟಳು ಗಂಡು ಕುಳಿತು ಕೆಟ್ಟನು, ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ, ಹೆಣ್ಣುಮಕ್ಕಳ ಬುದ್ಧಿ ಮೊಳಕಾಲ ಕೆಳಗೆ, ಕೊಟ್ಟ ಹೆಣ್ಣು ಕುಲದ ಹೊರಗೆ, ಗಂಡನೇ ದೇವರು, ಗಂಡ ಹೊಡೆದರೆ ಸ್ವರ್ಗಸಿಗುವುದು, ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ ಮುಂತಾದ ಗಾದೆಗಳು ಹೆಣ್ಣಿಗಿರುವ ಕೀಳರಿಮೆಯನ್ನು ಒತ್ತಿ ಹೇಳುತ್ತವೆ. ಆದರೆ ಇವು ವಾಸ್ತವಿಕ ಸತ್ಯವಲ್ಲ. ಹೆಣ್ಣನ್ನು ಬೆಳೆಯದಂತೆ ನಿಯಂತ್ರಿಸಲು ಪ್ರಜ್ಞಾಪೂರ್ವಕವಾಗಿ ಕಟ್ಟಿರುವ ಮಾತಿನ ತುಂಡುಗಳಿವು. ಇವುಗಳು ವ್ಯಕ್ತಪಡಿಸುವ ಅರ್ಥಕ್ಕೂ ಹೆಣ್ತನಕ್ಕೂ ಯಾವುದೇ ಸಂಬಂಧವಿಲ್ಲ.

ಒಂದು ಅಧ್ಯಯನದ ಪ್ರಕಾರ ಗಂಡಿಗಿಂತಲೂ ಹೆಚ್ಚು ಕೆಲಸ ಮಾಡುವವಳು ಹೆಣ್ಣು. ಆದರೆ ಅವಳಿಗೆ ಸಮಾಜದಲ್ಲಿ ಸಿಕ್ಕಿರುವ ಸ್ಥಾನಮಾತ್ರ ಅತಿಕನಿಷ್ಠ. ಇಂದು ಆಧುನಿಕಯುಗ, ತಂತ್ರಜ್ಞಾನಯುಗ ಏನೆಲ್ಲಾ ಕರೆದರೂ ಹೆಣ್ಣಿಗೆ ಸಿಕ್ಕಿರುವ ಇಂದಿನ ಸ್ಥಾನದಲ್ಲಿ ಯಾವುದೇ ಹೆಚ್ಚಿನ ಬದಲಾವಣೆಯನ್ನು ಕಾಣುತ್ತಿಲ್ಲ. ಹೆಣ್ಣನ್ನು ಗೌರವದಿಂದ ಕಾಣುತ್ತೇವೆ ಎಂದು ಹೇಳಲಾಗುತ್ತದೆ. ಆದರೆ ವಾಸ್ತವದಲ್ಲಿ ಅದು ಸತ್ಯವಲ್ಲ. ನಾವು ಜಗಳವಾಡುವಾಗ ಒಬ್ಬರಿಗೊಬ್ಬರು ಬೈದಾಡುವುದು ಸಹಜ. ಆದರೆ ಬೈಯುವ ಪದಗಳು ಯಾರಿಗೆ ಎಂಬುದನ್ನು ಒಂದುಕ್ಷಣ ಯೋಚಿಸಿದಾಗ ಆಗ ಹೆಣ್ಣಿಗೆ ನೀಡಿರುವ ಗೌರವ ತಿಳಿಯುತ್ತದೆ.

ಇಂದು ಸಮಾಜದಲ್ಲಿ ಸ್ತ್ರೀ ಸ್ಥಾನಮಾನದಲ್ಲಿ ಅಲ್ಪಮಟ್ಟಿನ ಸುಧಾರಣೆಯನ್ನು ಕಾಣುತ್ತೇವೆ. ಸಾಮಾಜಿಕ, ರಾಜಕೀಯ, ಔದ್ಯೋಗಿಕ, ಆರ್ಥಿಕ ಕ್ಷೇತ್ರಗಳಲ್ಲಿ ಬೆರಳೆಣಿಕೆಯ ಮಹಿಳೆಯರು ಸಿಕ್ಕಿರುವ ಅವಕಾಶವನ್ನು ಬಳಸಿ ಸಾಧನೆ ಮಾಡಿರುವುದನ್ನು ನೋಡಬಹುದು. ಪ್ರತಿಯೊಬ್ಬರಿಗು ಸಮಾನ ಅವಕಾಶಗಳು ಸಿಗಬೇಕು. ಆಗಮಾತ್ರ ಸಂವಿಧಾನದ ಆಶಯವನ್ನು ಸಾಧಿಸಲು ಸಾಧ್ಯ.

ಸಮಾಜದಲ್ಲಿ ಹೆಣ್ಣಿನ ಸ್ಥಾನ ಬದಲಾಗಲು ಕೇವಲ ಬಾಯಿಮಾತಿನಲ್ಲಿ ಅಥವಾ ಬರೆವಣಿಗೆಯಲ್ಲಿ ಬದಲಾದರೆ ಸಾಲದು, ವಾಸ್ತವವಾಗಿ ಪ್ರತಿಯೊಬ್ಬರ ನಿತ್ಯ ಆಚರಣೆಯಲ್ಲಿ ನಮ್ಮ ದೃಷ್ಟಿಕೊನ ಬದಲಾಗಬೇಕು. ಆಗ ಕುಟುಂಬ, ಸಮಾಜ, ರಾಷ್ಟ್ರ, ಹಂತ ಹಂತವಾಗಿ ಬದಲಾಗುವುದು. ಹೆಣ್ಣಿನ ಜೀವನ ಸಾಕಾರಗೊಳ್ಳಲು ಪ್ರತಿಯೊಂದು ಗಂಡು ಮತ್ತು ಹೆಣ್ಣು ಹೆಣ್ಣನ್ನು ಗೌರವಿಸುವುದರೊಂದಿಗೆ ಸಮಾನ ಅವಕಾಶಗಳನ್ನು ಒದಗಿಸಬೇಕು. ಆಗ ಹೆಣ್ಣಿನ ಸ್ಥಾನಮಾನದಲ್ಲಿ ಸಮಾನತೆ ಕಾಣಬಹುದು.

**– ರಾಮಚಂದ್ರ ಭಟ್**

**ಬೇಸಿಗೆ ರಜೆ.**

ಈ ವರ್ಷ ವಿಪರೀತ ಬಿಸಿಲ ಧಗೆ,
ಅದೇನು ಉರಿ..! ಶಾಖದ ಕೆನ್ನಾಲಗೆ?
ಅಪೂರ್ವ..! ವೈಶಾಖ ಕೊಟ್ಟ ಸಜೆ
ಜೀವ ಜಲವೇ ಹಾಕಿದೆ ರಜೆ.

ನಮ್ಮ ಕರ್ಮಕ್ಕೆ ಸಿಕ್ಕಿದ ಫಲ,
ನಮ್ಮದೇ ಸ್ವಂತವೆಂದು ಬಗೆದ ನೆಲ
ನಮ್ಮ ಹಕ್ಕಿನ ಭಾಗವಾದಾಗ ಜಲ
ನಿಸರ್ಗ ತೋರುವುದು ತನ್ನ ಬಲ.




ಆಯಿತೆಂದೇ ಭಾವಿಸಿದೆವು ಸಮೃದ್ಧಿ,
ಕೈಯಲ್ಲಾದರೆ ಕಾಸಿನ ವೃದ್ಧಿ.
ತೋರಿದೆವು ಕವಡೆ ಕಾಸಿನ ಬುದ್ಧಿ,
ಸಮಷ್ಟಿಯಲ್ಲಡಗಿಲ್ಲವೇ ಅಭಿವೃದ್ಧಿ?

ಫಲವಿಲ್ಲ ಆಳುವವರ ಹಂಗಿಸಿ,
ಇನ್ನಾದರೂ ನೋಡಿ ನೀರಿಂಗಿಸಿ.
ನೆಲವಾಗಬೇಕು ತಣ್ಣಗೆ; ಹಸಿ,
ಇಳಿದೀತು ನಮ್ಮ ಬಿಸಿ; ತಿಳಿದ ಹುಸಿ.

**– ಹರೀಶ್ ಶೆಟ್ಟಿ ಬಂಡ್ಸಾಲೆ**

## ಇಂದಾದರೂ ನನಸಾಗುವುದೇ ರಂಗಣ್ಣನ ಕನಸಿನ ದಿನಗಳು?

ಸಾವಿರದ ಒಂಬೈನೂರ ಮೂವತ್ತು ನಲವತ್ತರ ದಶಕದ ರಂಗಣ್ಣನ ಪುಸ್ತಕ ಓದುತ್ತ ಹೋದ ಹಾಗೆ ಆತ ನಮ್ಮ ಹತ್ತಿರದವರೆ ಅನಿಸಲು ಶುರುವಾಗುತ್ತದೆ. ಮುಂದಿನ ಘಟನೆ ಏನಿದೆ? ಅದನ್ನು ರಂಗಣ್ಣ ಹೇಗೆ ನಿಭಾಯಿಸಿದ? ಎನ್ನುವ ಕುತೂಹಲ ಜಾಗೃತವಾಗುತ್ತದೆ. ರಂಗಣ್ಣ ಎನ್ನುವ ಹೆಸರು ಹಾಗೂ ಪುಸ್ತಕದ ಮುಖಪುಟದಲ್ಲಿ ಹಾಕಿರುವ ರಂಗಣ್ಣನ ಚಿತ್ರ ಆತನ ಕುರಿತು ಹಾಸ್ಯ ಭಾವದಿಂದ ನೋಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ಆದರೆ ಪುಸ್ತಕ ಓದುಓದುತ್ತಾ ಆತ ಅಸಾಮಾನ್ಯ ವ್ಯಕ್ತಿ ಎಂದು ತಿಳಿಯುತ್ತದೆ. ಶಿಕ್ಷಣ ಕ್ಷೇತ್ರದ ಕುರಿತು ಆತನಿಗಿರುವ ಆಳವಾದ ಜ್ಞಾನ ಮತ್ತು ಕಾಳಜಿ ವಿಶೇಷವಾಗಿದೆ. ಪ್ರತಿಯೊಂದು ಘಟನೆಯನ್ನು ನಿಭಾಯಿಸುವ ಕೌಶಲ ಹಾಗೂ ಪರಿಣತಿ ಮೆಚ್ಚುವಂತಹುದಾಗಿದೆ.

ಲೇಖಕ ಎಂ.ಆರ್.ಶ್ರೀನಿವಾಸಮೂರ್ತಿ ಅವರ ಬರೆವಣಿಗೆ ಶೈಲಿಯು ವಿಶಿಷ್ಟವಾಗಿದೆ. ಪುಸ್ತಕಕ್ಕೆ ಹಿನ್ನುಡಿ ಬರೆದ ದೇ.ಜ.ಗೌ. ಅವರ ಮಾತುಗಳಲ್ಲಿ ವಿವರಿಸುವುದಾದರೆ ಇದು ಹರಟೆಯಲ್ಲ, ಕತೆಯಲ್ಲ, ಚಿತ್ರಗಳ ಗೊಂಚಲಲ್ಲ, ಕಾದಂಬರಿಯೂ ಅಲ್ಲ ಆದರೆ ಎಲ್ಲವೂ ಹೌದು. ಪ್ರತಿನಿತ್ಯದ ನಮ್ಮ ಜೀವನದಲ್ಲಿ ಕಾಣಬಹುದಾದ ಅನುಭವಗಳ ಚಿತ್ರಗಳು. ಈ ಅನುಭವಗಳ ಚಿತ್ರಶಾಲೆಯನ್ನು ಹೊಕ್ಕಮೇಲೆ ಹಿಂದಿರುಗುವುದೇ ಕಷ್ಟ, ಹಿಂದಿರುಗಿದ ನಂತರ ಆ ಚಿತ್ರಗಳನ್ನು ಮರೆಯುವುದೇ ಕಷ್ಟ. ಹೌದು, ಮರೆಯುವುದೇ ಕಷ್ಟ ! ಪುಸ್ತಕ ಓದಿ ಆರು ತಿಂಗಳ ನಂತರ ಈ ಲೇಖನವನ್ನು ಬರೆಯುತ್ತಿದ್ದೇನೆ. ಪ್ರತಿಯೊಂದು ಅಧ್ಯಾಯವೂ ಇನ್ನೂ ಹಸನಾಗಿ ನೆನಪಿನಲ್ಲಿ ಉಳಿದಿದೆ.

ಪುಸ್ತಕದಲ್ಲಿ ಬರುವ ಪಾತ್ರಗಳು ನಮ್ಮ ಇಂದಿನ ಶಾಲಾ ಶಿಕ್ಷಣ ವ್ಯವಸ್ತೆಯಲ್ಲಿ ಜೀವಂತವಾಗಿ ಕಾಣ ಸಿಗುತ್ತವೆ. ಅವು ಸುದ್ದೇನಹಳ್ಳಿಯ ಮೇಷ್ಟರ ಹಾಗೆ ವಿನಯದಿಂದ ಕೂಡಿದ ಶಿಕ್ಷಕರಿರಬಹುದು ಅಥವಾ ಉಗ್ರಪ್ಪನ ಹಾಗೆ ರಾಜಕೀಯ ಪ್ರೇರಿತ ಶಿಕ್ಷಕರಿರಿಬಹುದು. ಇವತು ಕಾಣುವಂತಹ ಬದ್ಧತೆಯುಳ್ಳ ಶಿಕ್ಷಕರು, ದರ್ಪದ ಅಧಿಕಾರಿಗಳು, ಅಧಿಕಾರಿಗಳನ್ನು ಓಲೈಸುವ ಪರಿ, ಹಳ್ಳಿ ಹಾಗೂ ಇತರ ಹಂತಗಳಲ್ಲಿ ನೆಡೆಯುವ ರಾಜಕೀಯಗಳು ಅಂದೂ ಇದ್ದವು. ಇನ್ನೊಂದು ಆಸಕ್ತಿದಾಯಕವಾದ ವಿಚಾರವೆಂದರೆ ಆ ಕಾಲದ ಸಮುದಾಯದ ಜವಾಬ್ದಾರಿ. ಪ್ರತಿ ಹಳ್ಳಿಯು ಶಾಲೆಗಳ ಕಟ್ಟಡ ವ್ಯವಸ್ತೆ ಮತ್ತು ಶಿಕ್ಷಕರ ವಸತಿ ಹಾಗೂ ಊಟದ ವ್ಯವಸ್ಥೆ ನೋಡಿಕೊಳ್ಳುತ್ತಿದ್ದವು. ಇದರಿಂದ ಶಿಕ್ಷಕರು ಕೂಡ ಹಳ್ಳಿಯ ಜನ ಹಾಗೂ ಮಕ್ಕಳ ಪ್ರಗತಿಯು ತಮ್ಮ ಬದ್ಧ ಕರ್ತವ್ಯ ಎಂದು ನೋಡುತ್ತಿದ್ದರು.

ರಂಗಣ್ಣ ಶಾಲಾ ಶಿಕ್ಷಣ ವ್ಯವಸ್ತೆಯ ಕುರಿತು ತನ್ನದೇ ಆದ ಕನಸುಗಳನ್ನು ಕಂಡಿದ್ದ. ಇದು ಲೇಖಕರ ಕನಸುಗಳೆಂದರೆ ತಪ್ಪಾಗಲಾರದು. ಸ್ವತಃ ಲೇಖಕರೇ ಶಿಕ್ಷಕ, ಶಿಕ್ಷಣ ಇನ್ಸಪೆಕ್ಟರ್, ಜಿಲ್ಲಾ ಶಿಕ್ಷಣ ಅಧಿಕಾರಿ ಹಾಗೂ ಶಿಕ್ಷಣ ತಜ್ಞರಾಗಿ ಸೇವೆ ಸಲ್ಲಿಸಿದವರು. ರಂಗಣ್ಣನ ಕನಸುಗಳು ಹೀಗಿದ್ದವು – ಎಲ್ಲಾ ಶಾಲೆಗಳಲ್ಲೂ ಅರ್ಹ ಶಿಕ್ಷಕರು ನೇಮಕವಾಗವೇಕು, ಶಿಕ್ಷಕ ಮತ್ತು ಮಕ್ಕಳ ಅನುಪಾತ ಸರಿ ಇರಬೇಕು. ಉಪಾಧ್ಯಾಯರಿಗೂ ಅಧಿಕಾರಿಗಳಿಗೂ ಮಧುರ ಬಾಂಧವ್ಯ ಬೆಳೆಯಬೇಕು. ಉಪಾಧ್ಯಾಯರಿಗೆ ತಿಳಿವಳಿಕೆ ಕೊಡಬಲ್ಲಂತಹ, ವಿಷಯ ಪರಿಣತಿ ಉಳ್ಳ ಅಧಿಕಾರಿಗಳು ನೇಮಕ ವಾಗಬೇಕು. ಇವರೆಲ್ಲರೂ ಸೇರಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು.

ಇಂದು ಶಿಕ್ಷಕರ ವೇತನ ಹೆಚ್ಚಾಗಿದೆ, ಸೌಲಭ್ಯ ಸೌಕರ್ಯಗಳು ಹೆಚ್ಚಾಗಿವೆ. ಶಾಲೆಗಳ ಸೌಕರ್ಯಗಳು ಕೂಡ ಸುಧಾರಿಸಿವೆ. ಶಿಕ್ಷಣ ಕ್ಷೇತ್ರವು ಕೂಡ ಹೊಸ ಹೊಸ ಸಂಶೋಧನೆಗಳಿಂದ ಬಹಳ ಮುಂದುವರೆದಿದೆ. ಆದರೆ ನಮಗೆ ರಂಗಣ್ಣನಂತಹ ಅಧಿಕಾರಿಗಳು ಬೇಕಾಗಿದ್ದಾರೆ. ಶೈಕ್ಷಣಿಕ ಜ್ಞಾನ ಹೊಂದಿದ್ದು, ಆಡಳಿತ ಪರಿಣತರಾಗಿದ್ದು, ಅಷ್ಟೇ ಶ್ರದ್ಧೆಯಿಂದ ನಿರ್ವಹಿಸುವ ಕಾರ್ಯವೈಖರಿಯ ಮನೋಭಾವನೆ ಬರಬೇಕಾಗಿದೆ. ಅಷ್ಟು ಮಾತ್ರವಲ್ಲದೆ ರಂಗಣ್ಣನ ಹಾಗೆ ಶಿಕ್ಷಕರ ನಾಡಿಮಿಡಿತ ಅರಿತು, ಮಾನಸಿಕವಾಗಿ ಹಾಗೂ ಶೈಕ್ಷಣಿಕವಾಗಿ ಬೆಂಬಲ ನೀಡುವ ಅನಿವಾರ್ಯತೆ ಇದೆ. ರಂಗಣ್ಣ ಆ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ಕುರಿತು ಕಂಡ ಕನಸುಗಳು ಇಂದಿಗೂ ಪ್ರಸ್ತುತವಾಗಿವೆ. ಈ ಪುಸ್ತಕವು ರಂಗಣ್ಣನ ಅಂದಿನ ಕನಸಗಳು ಇಂದಾದರೂ ನನಸಾಗಲಿ ಎಂದು ನನ್ನಲ್ಲಿ ಕನಸನ್ನು ಬಿತ್ತುತಿದೆ.

ಪುಸ್ತಕ: ರಂಗಣ್ಣನ ಕನಸಿನ ದಿನಗಳು
ಲೇಖಕರು: ಎಂ. ಆರ್ ಶ್ರೀನಿವಾಸಮೂರ್ತಿ
ಪ್ರಥಮ ಮುದ್ರಣ : 1949




**– ಜಗದೇವಿ**

## ಬೇಸಿಗೆಯ ದಿನಗಳಲ್ಲಿ

ಬೇಸಿಗೆ ಎಂದ ಕೂಡಲೆ ನಮ್ಮೆಲ್ಲರಿಗೂ ನೆನಪಾಗುವುದು ಅಬ್ಬಬ್ಬಾ! ಎಂತಹ ಬಿಸಿಲು! ಈ ಬಿಸಿಲಿನ ಬೇಗೆಯಲ್ಲಿ ಈ ವರ್ಷ ರೈತರ ಆತ್ಮಗಳು ಬೇಯುತ್ತಿವೆ. ಇಂತಹ ದುರ್ದೈವದ ಸಂಗತಿ ನಮ್ಮ ದೇಶದ ಬೆನ್ನೆಲುಬುಗಳಿಗೆ ಬಂದೊದಗಿದೆ. ರೈತರು ಕಷ್ಟ ಕಾರ್ಪಣ್ಯಗಳಿಗೆ ಸಿಕ್ಕು ತಮ್ಮ ಜೀವನದಿಗೆ ಶಾಶ್ವತ ವಿದಾಯ ಹೇಳಿದ ಮೇಲೆಯೇ ರಾಜಕಾರಣಿಗಳ ಕಣ್ಣಿಗೆ ಬೀಳುವುದು. ತಮ್ಮ ಪ್ರತಿಪಕ್ಷದ ವಿರುದ್ಧ ಇರುವ ಸೆಣಸಾಟಗಳನ್ನು ಮನಸಿನಲ್ಲಿಟ್ಟುಕೊಂಡು ಅಷ್ಟೋ–ಇಷ್ಟೋ ರೈತರಿಗೆ ಪರಿಹಾರ ಧನವಾಗಿ ಕೊಟ್ಟು ಮೀಡಿಯಾಗಳ ಮುಂದೆ ತಾವು ಸಮಾಜ ಸೇವಕರು ಒಳ್ಳೆಯವರು ಎಂಬುದಾಗಿ ಪ್ರತಿಬಿಂಬಿಸುವವರೇ ಹೆಚ್ಚಾಗಿದ್ದಾರೆ. ರೈತನ ಅಳಲಿಗೆ ನಿಜವಾದ  ಸಹಾನುಭೂತಿ ಸಿಗದೆ ಇರುವುದಕ್ಕೆ ಯಾರನ್ನು ಹೊಣೆ ಮಾಡುವುದು ಮಳೆರಾಯನನ್ನೇ? ಪ್ರತಿಯೊಂದಕ್ಕೂ ದಿನೇ–ದಿನೇ ಹೆಚ್ಚಾಗುತ್ತಿರುವ ಬೆಲೆಯನ್ನೇ? ಯಾವದನ್ನು ಹೊಣೆ ಮಾಡುವುದು? ರೈತ ತನ್ನ ಹಣೆಬರಹವನ್ನೇ ಹೊಣೆ ಮಾಡಿಕೊಂಡು ತನ್ನ ಕತ್ತನ್ನು ನೇಣಿಗೆ ಹಾಕಿಕೊಳ್ಳುವುದನ್ನು ಟಿ.ವಿ. ಮುಂದೆ ನಾವೆಲ್ಲರೂ ಸುಮ್ಮನೆ ಮೂಕವಿಸ್ಮಿತರಾಗಿ ಅಸಾಹಾಯಕತೆಯ ಹಣೆಯಪಟ್ಟಿಯನ್ನು ಹೊತ್ತು ಕುಳಿತುಬಿಟ್ಟಿದ್ದೇವೆ.

ಇರಲಿ ಬಿಡಿ. ಇದೊಂದು ಸಂಗತಿಯಾದರೆ ಹೆಣ್ಣು ಮಕ್ಕಳು ಬೇಸಿಗೆಯನ್ನುಅದೆಷ್ಟು ಸೊಗಸಾಗಿ ಕಳೆಯುತ್ತಾರೆ ಅಂತೀರಾ? 11 ಗಂಟೆ ಅಷ್ಟೊತ್ತಿಗೆ ಅಡುಗೆ ಮನೆಯ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಹಳ್ಳದ ಕಡೆ ಬಟ್ಟೆ ತೊಳೆಯಲಿಕ್ಕೆಂದು ಮುಖ ಮಾಡಿದ್ದೇ ತಡ, ಹೆಣ್ಣು ಮಕ್ಕಳ ಸೊಗಸಾದ ಮಾತಿನ ಭರಾಟೆ ಶುರು. ಹಳ್ಳದ ತುಂಬಾ ಗಲಗಲ ಮಾತು. ಜೋರಾದ ನಗು. ವಾತ್ಸಲ್ಯ ತುಂಬಿದ ಆತ್ಮೀಯತೆಯ ಮಾತುಗಳು ಅಕ್ಕ, ತಂಗಿ, ಅತ್ತೆ, ದೊಡ್ಡಪ್ಪ, ಚಿಕ್ಕಪ್ಪ ಎಂದೆಲ್ಲಾ ಮಾತುಗಳಿಂದ ಸಂಬಂಧಗಳನ್ನು ಬೆಸೆಯುತ್ತಾರೆ. ಆಗತಾನೆ ಮದುವ 'ಮಾಡಿಕೋಂಡು ಊರಿಗೆ ಬಂದ ಸೊಸೆಯಂದಿರಂತೂ ತಮ್ಮ ಅತ್ತೆ ಮಾವ ಗಂಡ ನಾದನಿಯವರ ಬಗ್ಗೆ ಮೆಚ್ಚುಗೆಯ ಮಾತಿನ ಸುರಿಮಳೆಗಳು.




ಮತ್ತೆ ಕೆಲವರು ಬೇವಿನ ಮರದ ಕೆಳಗೆ ಕೌದಿ ಹೊಲಿಯುತ್ತಾ, ಎಲೆ ಅಡಿಕೆ ತಿನ್ನುತಾ ಹೆಣ್ಣು ಮಕ್ಕಳ ಚಿಕ್ಕ ಪಂಚಾಯಿತಿಯೇ ನಡೆಯುತ್ತಿರುತ್ತದೆ. ತಮ್ಮ ತಮ್ಮಲ್ಲೇ ಗಂಡನ ಬಗ್ಗೆ ಮುದ್ದಾಗಿ ಛೇಡಿಸುವ ಮಾತುಗಳು, ನಾದಿನಿಯರ ಒಗಟಿನ ಬೈಗುಳದ ಮಾತುಗಳು. ಇನ್ನೊಂದು ಕಡೆ ಚಕಾರದ ಸೋಲು ಗೆಲುವಿನ ಆಟ ಆಡುತ್ತಾ ಇವರೆಲ್ಲರೂ ಕುಳಿತಿರುವಾಗ ಐಸ್‌ಕ್ರೀಂ ಗಾಡಿ ಪೋಂ ಪೋಂ ಎಂದು ಸದ್ದುಮಾಡುವುದೇ ತಡ ಎಲ್ಲಾ ಮಕ್ಕಳು ಐಸ್‌ಕ್ರೀಂ ಗಾಡಿಯನ್ನು ಮುತ್ತಿ ಬಿಡುತ್ತಾರೆ. ಉರಿಯುವ ಬಿಸಿಲಿನಲ್ಲಿ ತಣ್ಣನೆಯ ಐಸ್ ಕ್ಯಾಂಡಿ ತಿಂದು ಬೇಸಿಗೆಯ ದಿನಗಳನ್ನು ಖುಷಿಯಿಂದ ಕಳೆಯುತ್ತಾರೆ. ನಾನು ಈ ಪಂಚಾಯತಿಯಲ್ಲಿ ಯಾವಾಗಲಾದರೂ ಕಾಲಕಳೆಯಲು ಏನವ್ವ, ಟೀಚರ್‌ಅಮ್ಮ ನಿನಗ ಮೀಟಿಂಗ್ ಟ್ರೆನಿಂಗ್ ಇಲ್ಲೇನ ಇವತ್ತು? ನಮ್ಮ ಗುಂಪಿಗೆ ಸೇರುಕ 'ಬಂದಿದಿ ನಿನ್ನ ಮಕ್ಕಳೆಲ್ಲಿ? ಸಾಲಿ ಮಕ್ಕಳನ್ನ ಸ್ವಂತ ಮಕ್ಕಳಂಗ ನೋಡ್ತಿ. ಅದಕ್ಕ ನಿನ್ನ ಮಕ್ಕಳು ಅಂತ ಗಮ್ಮತ್ತ ಮಾಡಡೆ. ಇದು ನಿನ್ನ ದೊಡ್ಡಗುಣ. ಕೊನೆತನಕ ಹಿಂಗೇ ಇರಲಿ. ಆ ದೇವರು ಚೆನ್ನಾಗಿ ಇಟ್ಟಿರಲಿ ಎಂಬ ಪಕ್ಕದ ಮನೆಯ ದೇವಕ್ಕೆಮ್ಮಜ್ಜಿಯ ಆ ಮಾತು, ಆಶೀರ್ವಾದ ತುಂಬಿದ ಹಾರೈಕೆ ನನ್ನ ಮನಸಿಗೆ ಖುಷಿ ನೀಡಿ ಹೆಮ್ಮೆಯ ನಗು ಹೊರಚೆಲ್ಲಿತು.

**Thinking on Thinking**

I'm thinking that, what I don't want to think but thinking the same thing..!!

Finally I thought that, I have to think what I don't want to think..!!

Now I'm thinking the same thing but the other one thought something what I have not think...!!!!

- **Gopal Sali**






**: Bayalu Coordinators:**
***Gulbarga: Gundappa:*** gundappa.katekar@azimpremjifoundation.org
***Mandya: Ravi B T:*** ravi@azimpremjifoundation.org
***Bangalore: Ragavendra Herle:*** raghavendra.herle@azimpremjifoundation.org
***Yadgir: Rajashri Nayak:*** rajashri.nayak@azimpremjifoundation.org